ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ-೧೧ ಮಾರ್ಚ್ ೧೩, ೧೯೮೮ ರೂ. ೦-೭೫

ಒಳಪುಟದಲ್ಲಿ

ಸಿ.ಪಿ.ಐ. ಕಾರ್ಯಕ್ರಮದ ಕಮ್ಯೂನಿಸ್ಟ್ ಐಕ್ಯತೆಯ ಘೋಷಣೆ ಕುರಿತು

ಸಿ.ಐ.ಟಿ.ಯು. ರಾಜ್ಯ ಸಮ್ಮೇಳನ

ಜನಸಾಮಾನ್ಯರನ್ನು ಸಂಘಟಿಸಿ ಕಾಂಗ್ರೆಸ್ಸನ್ನು ಸೋಲಿಸಿ

ಸಿ.ಐ.ಟಿ.ಯು.ವಿನ ಚರಿತ್ರಾರ್ಹ 5 ನೇ ರಾಜ್ಯ ಸಮ್ಮೇಳನ ಹುಬ್ಬಳ್ಳಿಯಲ್ಲಿ ಮಾರ್ಚ್ 2ರಿಂದ 5 ರವರೆಗೆ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಮಾರ್ಚ್ 5 ರಂದು ಹುಬ್ಬಳ್ಳಿ ನಗರದ ಕಾರ್ಮಿಕ ವರ್ಗದ ಇತಿಹಾಸದಲ್ಲಿ ಹಿಂದೆಂದೂ ಕಾಣದಂತಹ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಯೊಂದಿಗೆ ಸಮ್ಮೇಳನ ಪೂರ್ಣಗೊಂಡಿತು. ಅಂದು ಮಧ್ಯಾಹ್ನ 3ಘಂಟೆಗೆ ಆರಂಭವಾದ ಮೆರವಣಿಗೆ 6 ಗಂಟೆಯ ಹೊತ್ತಿಗೆ ಭಾರತ್ ಮಿಲ್ ಚಾಣಕ್ಯ ರೋಡ್, ಹಳೇ ಹುಬ್ಬಳ್ಳಿ, ಕಾರ್ಪೊರೇಷನ್, ಕಿತ್ತೂರು ಚೆನ್ನಮ್ಮ ವೃತ್ತದ ಮಾರ್ಗವಾಗಿ ಸಮ್ಮೇಳನ ನಡೆಯುವ ಸ್ಥಳವನ್ನು ಸೇರಿತು. ಸುಮಾರು 10ಸಾವಿರ ಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಕಾರ್ಮಿಕರು ಒಂದು ಕಿ.ಮೀ. ಉದ್ದದ ವರ್ಣರಂಜಿತ ಮೆರವಣಿಗೆಯಲ್ಲಿ ತನ್ನ ಐಕ್ಯತೆಯನ್ನು ಪ್ರದರ್ಶಿಸಿದರು ಎಂದು ಹುಬ್ಬಳ್ಳಿಯ ಪ್ರಮುಖ ದೈನಿಕ ಬಣ್ಣಿಸಿದೆ.

ಅಂದು ಸಂಜೆ 6ಕ್ಕೆ ಇಂದಿರಾ ಗಾಜಿನ ಮನೆಯಲ್ಲಿ ನಡೆದ ಬಹಿರಂಗ ಅಧಿವೇಶನದಲ್ಲಿ ಕಾ॥ ಬಿ.ಟಿ.ರಣದಿವೆಯವರು ಕಾಂಗ್ರೆಸ್ ನೇತೃತ್ವದ ಭ್ರಷ್ಟ ರಾಜೀವ್ ಸರ್ಕಾರವನ್ನು ತಕ್ಷಣ ಕೆಳಗಿಳಿಸಲು ಎಲ್ಲ ಪ್ರಯತ್ನಗಳನ್ನು ಕಾರ್ಮಿಕ ವರ್ಗವು ಮಾಡಬೇಕಾಗಿದೆ ಎಂದು ಘೋಷಿಸಿದರು. ರಾಜೀವ್ ಸರ್ಕಾರವು ದೇಶದ ಐಕ್ಯತೆಯನ್ನು ಕಾಪಾಡುವಲ್ಲಿ ವಿಫಲವಾಗಿದೆ. ಕಳೆದ 4 ವರ್ಷಗಳಲ್ಲಿ ಬೆಲೆಯೇರಿಕೆ ವಿಪರೀತ ಹೆಚ್ಚಾಗಿದ್ದು, ನಿರುದ್ಯೋಗ ಪರಿಸ್ಥಿತಿ ಉಲ್ಬಣಗೊಂಡಿದ್ದು ಜನರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಹರಿಜನ-ಗಿರಿಜನ, ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ದಾಳಿಗಳು ಜಾಸ್ತಿಯಾಗಿದ್ದು, ಮಹಿಳೆಯರು ಎಲ್ಲ ವಿಧದ ಕ್ರೌರ್ಯಗಳಿಗೆ ಒಳಗಾಗಿದ್ದಾರೆ. ಮನೆಗೊಂದು ಕೆಲಸ, ಮಹಿಳೆಯರಿಗೆ ರಾಷ್ಟ್ರೀಯ ಯೋಜನೆ ಮುಂತಾದ ಕಾರ್ಯಕ್ರಮಗಳನ್ನು ರಾಜೀವ್ ಸರ್ಕಾರ ಹಮ್ಮಿಕೊಂಡಿದ್ದರೂ ಇದು ಬರಿಯ ಚುನಾವಣಾ ತಂತ್ರ. ಇದರ ವಿರುದ್ಧ ಕಾರ್ಮಿಕರ ಮೇಲಿನ ಜವಾಬ್ದಾರಿ ಹೆಚ್ಚಿದ್ದು ಸಾಮಾನ್ಯ ಜನರನ್ನು ಸಂಘಟಿಸಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಬೇಕೆಂದು ಕರೆ ನೀಡಿದರು. ಅದೇ ಸಮಯದಲ್ಲಿ ಜಾತೀಯ ಶಕ್ತಿಗಳನ್ನು ಸೋಲಿಸುವುದರೊಂದಿಗೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಬೇಕೆಂದು ಕಾರ್ಮಿಕ ವರ್ಗಕ್ಕೆ ಕರೆ ನೀಡಿದರು.

ಸಿ.ಐ.ಟಿ.ಯು.ವಿನ ರಾಜ್ಯ ಘಟಕದ ಅಧ್ಯಕ್ಷ ಕಾ॥ ಸೂರ್ಯನಾರಾಯಣರಾವ್ ಮತ್ತು ಮುಖಂಡರುಗಳಾದ ಕಾ॥ ಸಿ. ನಂಜುಂಡಪ್ಪ ಕಾ॥ ವಿ.ಜೆ.ಕೆ.ನಾಯರ್ ಮತ್ತು ಕಾ॥ ಮಹ್ಮದ್ ದಸ್ತಗೀರ್‌ರವರು ಮಾತನಾಡಿ 1983ರಲ್ಲಿ ರೈತ ಕಾರ್ಮಿಕರ ಹೋರಾಟದ ಮೂಲಕ ಜನತಾ ಸರ್ಕಾರ ಅಧಿಕಾರಕ್ಕೆ ಬಂದಿರುವುದನ್ನು (ಈಗಿನ ಜನತಾ ದಳ) ಜ್ಞಾಪಿಸಿಕೊಟ್ಟರು.

ಆದರೆ 1985 ರಲ್ಲಿ ಪುನಃ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೈತ ಕಾರ್ಮಿಕರ ಸಮಸ್ಯೆಗಳಿಗೆ ಗಮನಹರಿಸಿಲ್ಲ ಮಾತ್ರವಲ್ಲ, ಸದ್ಯದಲ್ಲಿ ಕಾರ್ಮಿಕ ಇಲಾಖೆಗೆ ಪೂರ್ಣಾವಧಿ ಮಂತ್ರಿ ಇರುವುದಿಲ್ಲ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಬೇಕಾದರೆ ಜನತಾ ದಳವು ಜಾತೀಯ ಶಕ್ತಿಗಳನ್ನು ದೂರವಿಟ್ಟು ಎಡಶಕ್ತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದರ ಜೊತೆಗೆ, ರಾಜ್ಯದಲ್ಲಿ 6ಲಕ್ಷಕ್ಕೂ ಹೆಚ್ಚು ಇರುವ ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿಪಡಿಸಿ, ಕಂಟ್ರಾಕ್ಟ್ ಪದ್ಧತಿಯನ್ನು ರದ್ದುಗೊಳಿಸಬೇಕೆಂದು ಒತ್ತಾಯಪಡಿಸಿದರು.

ಈ ಮೊದಲು 5 ನೇ ರಾಜ್ಯ ಸಮ್ಮೇಳನವನ್ನು ಸಿ.ಐ.ಟಿ.ಯು. ಅಧ್ಯಕ್ಷ ಮತ್ತು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಬಿ.ಟಿ.ರಣದಿವೆಯವರು ಮಾ. 2ರಂದು ಸಂಜೆ 4 ಗಂಟೆಗೆ ಉದ್ಘಾಟಿಸಿದರು. ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಸೂರ್ಯನಾರಾಯಣರಾವ್ ಅವರಿಂದ ಧ್ವಜಾರೋಹಣವಾದ ಬಳಿಕ ಮುಖಂಡರು ಹಾಗೂ ಪ್ರತಿನಿಧಿಗಳು ಹುತಾತ್ಮ ವೇದಿಕೆಗೆ ಬಂದು ಕಾರ್ಮಿಕ ಸಂಘಟನೆಗಾಗಿ ದುಡಿದು ಮಡಿದವರನ್ನು ಹಾಗೂ ದೇಶದ ಐಕ್ಯತೆಗಾಗಿ ಜನತೆಯ ಒಗ್ಗಟ್ಟಿಗಾಗಿ ಹೋರಾಡುತ್ತಾ ಛಿದ್ರಕಾರಿ ಶಕ್ತಿಯ ಕೈಯಲ್ಲಿ ಹತ್ಯೆಗೊಳಗಾದವರನ್ನು ಸ್ಮರಿಸಿದರು. ಯಾವ ಉನ್ನತ ಧ್ಯೇಯಗಳಿಗಾಗಿ ಸಂಗಾತಿಗಳು ತಮ್ಮ ತ್ಯಾಗ ಬಲಿದಾನಗೈದರೋ ಆ ಧ್ಯೇಯವನ್ನು ಸಾಧಿಸುವವರೆಗೂ ಎಂತಹ ತ್ಯಾಗಕ್ಕೂ ತಯಾರಿ ಎಂದು ಪಣತೊಟ್ಟು ಹುತಾತ್ಮರ ವೇದಿಕೆಗೆ ಕೆಂಪು ವಂದನೆ ಸಲ್ಲಿಸಿದರು.

ಇಂದಿನ ಕಾಲಘಟ್ಟದಲ್ಲಿ ದೇಶವು ಉಳಿಯಬೇಕಾದರೆ ರಾಜೀವ್ ಸರ್ಕಾರವನ್ನು ಸೋಲಿಸುವುದು ಕಾರ್ಮಿಕ ವರ್ಗದ ಪ್ರಥಮ ಕರ್ತವ್ಯ ಎಂದು ಬಿ.ಟಿ.ಆರ್. ಕರೆ ಇತ್ತರು. ಅದೇ ಸಮಯದಲ್ಲಿ ನ್ಯಾಷನಲ್ ಫ್ರಂಟ್ ಸರಿಯಾದ ದಾರಿಯಲ್ಲಿ ಹೋಗುತ್ತದೆ ಎಂಬ ಭ್ರಮೆ ಇರಕೂಡದು. ಈಗಾಗಲೇ ಪ್ರಧಾನಿ ಪಟ್ಟಕ್ಕೆ ಯಾರು ಎಂದು ಕಚ್ಚಾಟ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಎಡಪಕ್ಷಗಳ ಕಾರ್ಯಾಚರಣೆಗಳಿಗೆ ಬೆಂಬಲ ನೀಡಿ ಕಾರ್ಯಕ್ರಮಗಳ ಆಧಾರದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಪ್ರೋತ್ಸಾಹ ನೀಡಬೇಕೆಂದು ಕೇಳಿಕೊಂಡರು.

ಉದ್ಘಾಟನೆಯ ನಂತರ 336 ಪ್ರತಿನಿಧಿಗಳನ್ನೊಳಗೊಂಡ ಸಭೆಯು 2ನಿಮಿಷಗಳ ಮೌನದೊಂದಿಗೆ ದಿ॥ ಕಾ॥ ರಾಮಮೂರ್ತಿ ಮತ್ತು ಕಾ॥ ಸುಂದರಯ್ಯನವರಿಗೆ ಶ್ರದ್ಧಾಂಜಲಿ ಸಲ್ಲಿಸಿತು.

ಆನಂತರ ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಪರವಾಗಿ ಕಾ॥ ಪಿ. ರಾಮಚಂದ್ರರಾವ್ ಅವರು ಶುಭ ಹಾರೈಸಿ ಮಾತನಾಡಿದರು. ಈಗಾಗಲೇ ಸಿ.ಐ.ಟಿ.ಯು. ನೇತೃತ್ವದ ಕಾರ್ಮಿಕ ಸಂಘಗಳು ರೈತ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳನ್ನು ಬಲಪಡಿಸಲು ಸಹಾಯ ಮಾಡಿದ್ದೇ ಅಲ್ಲದೆ ಬರಗಾಲದ ಸಮಯದಲ್ಲಿಯೂ ಅವರಿಗೆ ಸಹಾಯ ಮಾಡಿದ್ದೀರಿ. ಆದ್ದರಿಂದ ಶೋಷಣೆ ರಹಿತ ಸಮಾಜವನ್ನು ಕಟ್ಟುವ ದಿಸೆಯಲ್ಲಿ ಮುಂಚೂಣಿ ಪಾತ್ರವನ್ನು ವಹಿಸುತ್ತಿರುವ ನಿಮಗೆ ಕರ್ನಾಟಕ ರಾಜ್ಯದ ರೈತ ಮತ್ತು ಕೃಷಿ ಕೂಲಿಕಾರರ ವರ್ಗದವರು ಭುಜಕ್ಕೆ ಭುಜ ಕೊಟ್ಟು ಶ್ರಮಿಸುತ್ತಾರೆ ಎಂಬ ಭರವಸೆಯನ್ನಿತ್ತರು.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಘಟಕದ ಪರವಾಗಿ ಕಾ॥ ಹರಿಣಿ ಕಕ್ಕೇರಿಯವರು ಶುಭ ಕೋರಿ ಮಾತನಾಡಿದರು.

ನಂತರ ಪ್ರಧಾನ ಕಾರ್ಯದರ್ಶಿಯವರು ಕರಡು ವರದಿಯನ್ನು ಮಂಡಿಸುತ್ತಾ ಕಳೆದ ನಾಲ್ಕೂವರೆ ವರ್ಷಗಳ ಚಟುವಟಿಕೆಗಳನ್ನು ವರದಿಯಲ್ಲಿ ಸೇರಿಸಲಾಗಿದ್ದು ಇಂದಿನ ಬೆಳೆಯುತ್ತಿರುವ ಅಂತರ್‍ರಾಷ್ಟ್ರೀಯ ಮತ್ತು ರಾಷ್ಟ್ರೀಯ ಚಳುವಳಿಯ ಹಿನ್ನೆಲೆಯಲ್ಲಿ ನಮ್ಮ ಕರ್ತವ್ಯಗಳನ್ನು ಗುರ್ತಿಸಬೇಕಾಗಿದೆ ಎಂದರು. ಸಂಘಟನೆಯ ಶಕ್ತಿಗೆ ಅನುಸಾರವಾಗಿ ಹೆಚ್ಚಿನೆಲ್ಲ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿದ್ದರೂ ನಮ್ಮ ಮುಂದಿರುವ ಜವಾಬ್ದಾರಿಯನ್ನು ಗಮನಿಸಿ ನಮ್ಮ ಕೆಲಸಗಳನ್ನು ಇನ್ನಷ್ಟು ಹೆಚ್ಚು ಮಾಡಬೇಕಾಗಿದೆ. ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯ ಕರ್ತವ್ಯವನ್ನು ಪೂರೈಸುವುದಕ್ಕಾಗಿ ಶಾಂತಿ ಚಳುವಳಿಯಲ್ಲಿ, ವರ್ಣ ಭೇದದ ವಿರುದ್ಧ, ದೇಶದ ತಟಸ್ಥ ಧೋರಣೆಯನ್ನು ಕಾಪಾಡುವಲ್ಲಿ ನಾವು ಇನ್ನಷ್ಟು ಮುತುವರ್ಜಿ ವಹಿಸಿ ಕೆಲಸ ಮಾಡಬೇಕಾಗಿದೆ. ಅದೇ ಸಂದರ್ಭದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಕಾರ್ಮಿಕ ಚಳುವಳಿಯನ್ನು ಬಲಪಡಿಸಲು, ಕಾರ್ಮಿಕ ಸಂಘಗಳ ಐಕ್ಯತೆಯನ್ನು ಬೆಳಸಲು ರಾಷ್ಟ್ರೀಯ ಆಂದೋಲನ ಸಮಿತಿಯ ಮೂಲಕ ನಿರಂತರ ಶ್ರಮಿಸುತ್ತಿರುವ ಸಿ.ಐ.ಟಿ.ಯು.ವನ್ನು ಕರ್ನಾಟಕದಲ್ಲೂ ಇನ್ನಷ್ಟು ಬಲಪಡಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಅಸಂಘಟಿತ ಕಾರ್ಮಿಕರನ್ನು, ದುಡಿಯುವ ಮಹಿಳೆಯರನ್ನು ಶೋಷಿತರಲ್ಲಿ ಅತ್ಯಂತ ಹೆಚ್ಚು ದಬ್ಬಾಳಿಕೆಗೆ ಒಳಗಾಗಿರುವ ಹರಿಜನ-ಗಿರಿಜನ, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಕಾರ್ಮಿಕರನ್ನು ಸಂಘಟಿಸಬೇಕಾಗಿದೆ. ದೇಶದ ಸ್ವಾವಲಂಬನೆಯನ್ನು ಉಳಿಸಿಕೊಳ್ಳುವಲ್ಲಿ ಹೋರಾಟ ನಡೆಸುತ್ತಿರುವ ಸಾರ್ವಜನಿಕ ಕ್ಷೇತ್ರದ ನೌಕರರ

ರಾಜ್ಯದ ಕಾರ್ಮಿಕರಿಗೆ ಬಿ.ಟಿ.ಆರ್. ಕರೆ

ಮಧ್ಯೆ, ಸಾರಿಗೆ, ವಿದ್ಯುಚ್ಛಕ್ತಿ ಮುಂತಾದ (Statigu) ಕೈಗಾರಿಕೆಗಳಿಗೆ ಸಂಘಟನಾ ಶಕ್ತಿಯನ್ನು ವಿಸ್ತರಿಸಬೇಕಾಗಿದೆ.

ಈ ದಿಸೆಯಲ್ಲಿ ಮುಂದಿರುವ 4ವರ್ಷಗಳಿಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ವರದಿಯನ್ನು ಬಲಪಡಿಸಬೇಕು ಎಂದು ಕೋರಿದರು.

ಸಮ್ಮೇಳನದಲ್ಲಿ 267 ಪ್ರತಿನಿಧಿಗಳು ಮತ್ತು 68 ವೀಕ್ಷಕ/ ಸೌಹಾರ್ದ ಪ್ರತಿನಿಧಿಗಳು ಭಾಗವಹಿಸಿದ್ದು 42 ಮಂದಿ ವರದಿಯ ಮೇಲೆ ಮಾತನಾಡಿದರು. ಸಮ್ಮೇಳನದಲ್ಲಿ 2 ಗಂಟೆಗಳ ಅವಧಿಯನ್ನು ಏಡಿಯ ಯುವ ಮಹಿಳೆಯರ ಸಂಘಟನೆಗೆ ಮೀಸಲಾಗಿಸಿದ್ದು ಮೂವರು ಪುರುಷರನ್ನು ಒಳಗೊಂಡು 15 ಪ್ರತಿನಿಧಿಗಳು ಮಾತನಾಡಿದರು. (ಪ್ರತ್ಯೇಕ ವರದಿ ಮುಂದಿನ ಸಂಚಿಕೆಯಲ್ಲಿ.)

ಹೆಚ್ಚು ಕಡಿಮೆ ಎಲ್ಲಾ ಸಂಗಾತಿಗಳು ಸಂಘಟನೆಯನ್ನು ವಿಸ್ತರಿಸಿ ಬೆಳೆಸುವ ಕುರಿತು ಸಲಹೆ ನೀಡಿದ್ದು ವರದಿಯ ಪ್ರತಿಯೊಂದು ಪುಟವನ್ನು ಜೀರ್ಣಿಸಿಕೊಂಡಂತಿತ್ತು. ಓದುಬರಹ ಬಾರದ ಕಾರ್ಮಿಕರು ಸಹ ಬೇರೆಯವರಿಂದ ತಿಳಿದು, ಚರ್ಚಿಸಿ ತಮ್ಮ ಅನುಭವಗಳನ್ನು ತೋಡಿಕೊಂಡರು. ತುಳು, ತಮಿಳು, ಮಲಯಾಳಂ, ಉರ್ದು ಸೇರಿದಂತೆ ವಿವಿಧ ಭಾಷೆಗಳಲ್ಲಿ ಮಾತನಾಡಿದ ಪ್ರತಿನಿಧಿಗಳು ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯ ಧ್ವಜವನ್ನು ಎತ್ತಿ ಹಿಡಿದರು.

ಬಾಲಕಾರ್ಮಿಕರನ್ನು ಸಂಘಟಿಸಬೇಕು, ದುಡಿಯುವ ಮಹಿಳೆ ಅದರಲ್ಲೂ ಮುಸ್ಲಿಂ ಮಹಿಳೆಯರ ಸಮಸ್ಯೆಗಳಿಗೆ ವಿಶೇಷ ಆದ್ಯತೆ, ಹರಿಜನ-ಗಿರಿಜನರ ಸಮಸ್ಯೆಗಳನ್ನು ಕ್ರೋಢೀಕರಿಸಿ ಅವರನ್ನು ಸಂಘಟಿಸುವುದು. ರಾಜ್ಯ ಮಟ್ಟದ, ದೇಶಮಟ್ಟದ ಒಕ್ಕೂಟಗಳನ್ನು ಸ್ಥಾಪಿಸಬೇಕು ಎನ್ನುವ ಹಲವಾರು ಉತ್ತಮ ಸಲಹೆಗಳನ್ನು ಕಾರ್ಯದರ್ಶಿಯವರು ಅಂಗೀಕರಿಸಿದ ಬಳಿಕ ಪ್ರಚಂಡ ಕರತಾಡನಗಳಿಂದ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ವಿ.ಐ.ಎಸ್.ಎಲ್. ಆಡಳಿತವನ್ನು ವಹಿಸಿಕೊಳ್ಳಲು ಒತ್ತಾಯ, ದೇಶದ ಐಕ್ಯತೆ, ಸಮಗ್ರತೆಯಲ್ಲಿ ಕಾರ್ಮಿಕರ ಪಾತ್ರ ಮುಂತಾದ ಕಾರ್ಮಿಕರ, ಜನರ ದೇಶದ ಸಮಸ್ಯೆಗಳಿಗೆ ಸ್ಪಂದಿಸುವ 27 ಗೊತ್ತುವಳಿಗಳನ್ನು ಸಮ್ಮೇಳನ ಚರ್ಚಿಸಿ ಅಂಗೀಕರಿಸಿತು.

ಒಟ್ಟು 130 ಸದಸ್ಯರಿರುವ ರಾಜ್ಯ ಮಂಡಳಿಯನ್ನು, 9 ಪದಾಧಿಕಾರಿಗಳು ಸೇರಿದಂತೆ 45 ಸದಸ್ಯರುಳ್ಳ ರಾಜ್ಯ ಸಮಿತಿಯನ್ನು ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿತು.

ಹೊಸ ಪದಾಧಿಕಾರಿಗಳು

ಸಿ.ಐ.ಟಿ.ಯು. 5 ನೇ ರಾಜ್ಯ ಸಮ್ಮೇಳನ ಆರಿಸಿದ ಪದಾಧಿಕಾರಿಗಳ ವಿವರ ಹೀಗಿದೆ.

ಅಧ್ಯಕ್ಷರು :
ಕಾ॥ ಎಸ್.ಸೂರ್ಯನಾರಾಯಣರಾವ್

ಉಪಾಧ್ಯಕ್ಷರುಗಳು :
ಕಾ॥ ಸಿ.ನಂಜುಂಡಪ್ಪ
ಕಾ॥ ಕೆ.ಮೂಸಬ್ಬ
ಕಾ॥ ಮಹ್ಮದ್ ದಸ್ತಗೀರ್

ಪ್ರಧಾನ ಕಾರ್ಯದರ್ಶಿ:
ಕಾ॥ ವಿ.ಜೆ.ಕೆ.ನಾಯರ್

ಕಾರ್ಯದರ್ಶಿಗಳು :
ಕಾ॥ ಎನ್.ಕೆ. ಉಪಾಧ್ಯಾಯ
ಕಾ॥ ಎಂ.ಬಿ.ಕಟ್ಟಿ
ಕಾ॥ ವಿ.ಸುಕುಮಾರ್

ಕೋಶಾಧಿಕಾರಿ ;
ಕಾ॥ ಕೆ.ವಿ.ಶ್ರೀನಿವಾಸನ್



ಹೌರ ನಗರ ಸಭೆಯಲ್ಲಿ ಎಡರಂಗ ಬಲವೃದ್ಧಿ

ಮಾರ್ಚ್ 5 ರಂದು ಪಶ್ಚಿಮ ಬಂಗಾಳದ ಹೌರಾ ನಗರಸಭೆಗೆ ನಡೆದ ಚುನಾವಣೆಯಲ್ಲಿ ಎಡರಂಗ 30 ಸ್ಥಾನಗಳನ್ನು ಗಳಿಸಿ ಸ್ಪಷ್ಟ ವಿಜಯ ಗಳಿಸಿತು. ಎಡರಂಗದ ಜೊತೆಗೆ ಮೈತ್ರಿ ಹೊಂದಿದ್ದ ಜನತಾ ದಳ ಒಂದು ಸ್ಥಾನ ಗೆದ್ದುಕೊಂಡಿತು. ಕಾಂಗ್ರೆಸ್ (ಐ)ನ ಸೀಟುಗಳ ಸಂಖ್ಯೆ ಹಿಂದಿನ 24ರಿಂದ 19ಕ್ಕಿಳಿದಿದೆ. ಸಿ.ಪಿ.ಐ.(ಎಂ) ಒಂದೇ 26 ಸ್ಥಾನಗಳಲ್ಲಿ ಜಯಗಳಿಸಿದೆ.

ಪಶ್ಚಿಮ ಬಂಗಾಳದ ಇತರ ಚುನಾವಣೆಗಳಂತೆ ಇಲ್ಲಿಯೂ ಇಡೀ ದೇಶವನ್ನು ಬಾಧಿಸುವ ಪ್ರಶ್ನೆಗಳೇ ಮುಖ್ಯ ಚರ್ಚಾ ವಿಷಯಗಳಾಗಿದ್ದವು.

ಗೂಂಡಾ ಹಲ್ಲೆ ಬಗ್ಗೆ ತನಿಖೆಗೆ ಒತ್ತಾಯ

ಶಿವಮೊಗ್ಗ ನಗರದಲ್ಲಿ ಸಿ.ಪಿ.ಐ.(ಎಂ) ನಗರ ಕಾರ್ಯದರ್ಶಿ ಮಹ್ಮದ್ ಇಬ್ರಾಹಿಂ ಮತ್ತು ಅಮಾಲಿ ಕಾರ್ಮಿಕ ಸಂಘದ ಕಾರ್ಯದರ್ಶಿ ಆರಿಫ್‌ರವರ ಮೇಲೆ ಪೂರ್ವನಿಯೋಜಿತ ಹಲ್ಲೆ ನಡೆಸಿರುವ ಗೂಂಡಾಗಳ ವಿರುದ್ಧ ತನಿಖೆ ನಡೆಸಬೇಕೆಂದು ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾ॥ ಎಸ್. ಸೂರ್ಯನಾರಾಯಣರಾವ್ ಅವರು ಒತ್ತಾಯಿಸಿದರು. ಅವರು ಫೆ 25 ರಂದು ಶಿವಮೊಗ್ಗದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಈ ಹಲ್ಲೆಯ ಹಿಂದೆ ಮಾಲೀಕರ ಕೈವಾಡವಿದ್ದು ಈ ಘಟನೆಗೆ ಕೋಮು ಗಲಭೆಯ ಬಣ್ಣ ಕಟ್ಟಲು ಪೊಲೀಸರು ನಡೆಸಿರುವ ಸಂಚಿನ ವಿರುದ್ಧ ಕಾರ್ಮಿಕರು ಎಚ್ಚರದಿಂದಿರಬೇಕೆಂದು ಅವರು ಕರೆ ನೀಡಿದರು. ಕಾಂಗ್ರೆಸ್ ಸರ್ಕಾರ ನಿರುದ್ಯೋಗ, ಬಡತನ, ಬೆಲೆಯೇರಿಕೆ ತಡೆಗಟ್ಟುವಲ್ಲಿ ವಿಫಲವಾಗಿದ್ದು ಇತ್ತೀಚಿನ ಚುನಾವಣೆಗಳಲ್ಲಿ ಪತನದ ದಾರಿ ಹಿಡಿದಿದೆ ಎಂದು ಅವರು ಹೇಳಿದರು. ಶಿವಮೊಗ್ಗ ಜಿಲ್ಲಾ ಕಾರ್ಯದರ್ಶಿ ಕಾ॥ ಎಸ್.ಬಿ.ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾ॥ ರಂಗೇಗೌಡ ಸ್ವಾಗತಿಸಿ ಬಿ.ಎಸ್.ದಾಸ್ ವಂದಿಸಿದರು.

ಮಾರ್ಚ್ 14-16; ಕರ್ನಾಟಕ ಪ್ರಾಂತ ರೈತ ಸಂಘ-9ನೇ ಸಮ್ಮೇಳನ: ಬಳ್ಳಾರಿ

ಮೂಲಭೂತ ಐಕ್ಯತೆಯ

ಕಮ್ಯೂನಿಸ್ಟ್

ಸಿ.ಪಿ.ಐ.ನ ಹದಿನಾಲ್ಕನೇ ಮಹಾ ಯಲ್ಲಿ ಆ ಪಕ್ಷದ ಮುಖಂಡರು ಅವರ ವಿವಿಧ ಸಮ್ಮೇಳನಗಳಲ್ಲಿ ಭಾ ಅವರು ಒಂದು ಮುಖ್ಯ ಅಂಶವನ್ನಾ ಅಭಿಪ್ರಾಯ ಕೂಡಾ ಇಂತಹ ಅಪೇಕ್ಷೆ ಸನ್ನಿವೇಶದಲ್ಲಿ ದೇಶವನ್ನು ಮುಂದೊ ಅವರ ಅಭಿಪ್ರಾಯ. ಬೇರೆ ದೇಶಗಳ ಸ ಸಿವೆ.

ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಪ್ರಶ್ನೆಯ ಬಗ್ಗೆ ಸಿ.ಪಿ.ಐ.(ಎಂ) ನಿಲುವ ಸಿದ್ಧಪಡಿಸಿದ ಕರಡು ಕಾರ್ಯಕ್ರಮದ ವಿಶ್ಲೇಷಣೆ

ಕಮ್ಯೂನಿಸ್ಟ್ ಪಕ್ಷ ಕಾರ್ಮಿಕ ವರ್ಗದ ಒಂದು ಕ್ರಾಂತಿಕಾರಿ ಪಕ್ಷ. ಇದು ಎಲ್ಲರಿಗೂ ತಿಳಿದ ಸಂಗತಿ. ಕಮ್ಯೂನಿಸ್ಟ್ ಪಕ್ಷದ ಪ್ರಮುಖ ಕರ್ತವ್ಯ ವಿವಿಧ ಹಂತಗಳನ್ನು ಪರಿಗಣಿಸಿ ಕ್ರಾಂತಿ ಮಾಡುವುದು. ಅಂತಿಮ ವಾಗಿ ಸಮಾಜವಾದ ಮತ್ತು ಕಮ್ಯೂನಿಸಂ ನತ್ತ ಮುನ್ನಡೆಯುವುದು. ಈ ಕರ್ತವ್ಯ ನೆರವೇರಿಸುವಲ್ಲಿ ಮಾರ್ಗದರ್ಶನ ನೀಡುವ ಸಂಗತಿಗಳೆಂದರೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಕ್ರಾಂತಿಕಾರಿ ಸಿದ್ಧಾಂತ ಮತ್ತು ದ್ವಂದ್ವಾತ್ಮಕ, ಹಾಗೂ ಚಾರಿತ್ರಿಕ ಭೌತವಾದೀ ದೃಷ್ಟಿಕೋನ.

ಮಾರ್ಕ್ಸ್‌ವಾದ-ಲೆನಿನ್‌ವಾದದ ವಿಜ್ಞಾನದ ಆಳವಾದ ತಿಳುವಳಿಕೆ ಹಾಗೂ ದೇಶದ ಮೂರ್ತ ಸನ್ನಿವೇಶಕ್ಕೆ ಅದರ ಸರಿಯಾದ ಅನ್ವಯ-ಯಾವುದೇ ಕಮ್ಯೂನಿಸ್ಟ್ ಪಕ್ಷದ ಯಶಸ್ಸಿನ ಆಧಾರ. ವಿಶ್ವ ಕಮ್ಯೂನಿಸ್ಟ್ ಆಂದೋಲನದ ಇತಿಹಾಸ ಇದನ್ನು ತೋರಿಸಿ ಕೊಡುತ್ತದೆ. ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಕರ್ತವ್ಯಗಳ ಸೂಕ್ತ ಸಮನ್ವಯ, ಸಿದ್ಧಾಂತ ಮತ್ತು ಆಚರಣೆಯ ಪರಸ್ಪರ ಮಿಳಿತ ಹಾಗೂ ಅಗತ್ಯ ಬಿದ್ದಾಗ ಸಮಯಕ್ಕೆ ಸರಿಯಾಗಿ ದೃಷ್ಟಿಕೋನ ಸರಿಪಡಿಸುವುದು- ಇದು ಅತ್ಯಗತ್ಯ. ಕಮ್ಯೂನಿಸ್ಟ್ ಪಕ್ಷಗಳ ಐಕ್ಯತೆಗೆ ಇದು ಅನಿವಾರ್ಯ. ಇದಿಲ್ಲದೆ ಐಕ್ಯತೆಯ ಮಾತು ಕೇವಲ ಸಮಯ ಸಾಧಕತನ. ಲೆನಿನ್ ಜೀವಮಾನವಿಡೀ ಈ ಸಮಯ ಸಾಧಕತೆಯ ವಿರುದ್ಧ ಹೋರಾಡಿ ದರು.

ಭಾವನೆ ಕೆರಳಿಸುವ ತಂತ್ರ

ಆದರೆ ದುರದೃಷ್ಟವಶಾತ್ ಈಗ ಮೂಲಭೂತ ಕಾರ್ಯಕ್ರಮಾತ್ಮಕ ನಿಲುವುಗಳನ್ನು ಪರಿಗಣಿಸದೇಯೇ ಐಕ್ಯತೆಯ ಪ್ರಶ್ನೆ ಎತ್ತಲಾ ಗುತ್ತಿದೆ. ಸಿ.ಪಿ.ಐ. ಕೂಡಾ ಈಗ ರಾಜೀವ್ ಗಾಂಧಿ ಸರ್ಕಾರವನ್ನು ಇಳಿಸಿ ಅದರ ಸ್ಥಾನ ದಲ್ಲಿ ಎಡ, ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿ ಗಳ ಐಕ್ಯತೆಯನ್ನು ಪ್ರತಿಪಾದಿಸುವುದರಿಂದ ಈ ಎರಡು ಪಕ್ಷಗಳ ನಡುವಿನ ಮೂಲಭೂತ ಭಿನ್ನಾಭಿಪ್ರಾಯ ಪರಿಹಾರಗೊಂಡಿತು ಎಂದು ಕೆಲವು ಮಿತ್ರರು ಭಾವಿಸುತ್ತಾರೆ. ಆದರೆ ಪಕ್ಷದ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಭಿನ್ನಾಭಿಪ್ರಾ ಯಗಳು ಪರಿಹಾರವಾಗದೆ ಮತ್ತೆ ಪರಿಸ್ಥಿತಿ ಏರುಪೇರಾದಾಗ ಅದರ ಜತೆಗೇ ಕಾರ್ಯತಂತ್ರವೂ ಬದಲಾಗಬಹುದು. ಹಿಂದೆ ಹೀಗೆ ಆಗಿದೆ.

ಕಮ್ಯೂನಿಸ್ಟ್ ಆಂದೋಲನದಲ್ಲಿ ಒಡಕು ಉಂಟಾದಾಗ ವಿವಾದದ ಒಂದು ಮುಖ್ಯ ವಿಷಯ- ಬೂರ್ಜ್ವಾ ವರ್ಗದ ಬಗ್ಗೆ ನಿಲುವು. ಆಳುವ ಪಕ್ಷದೊಂದಿಗೆ ಸಹಕರಿಸಬೇಕೆಂದು ಸಿ.ಪಿ.ಐ ಪ್ರತಿಪಾದಿಸಿತು. ಆದರೆ 1966-67ರಲ್ಲಿ ಜನತೆಯ ಒಲವು ಅತ್ಯಂತ ಕಾಂಗ್ರೆಸ್-ವಿರೋದಿಯಾದಾಗ ಸಿ.ಪಿ.ಐ. ತನ್ನ ನಿಲುವು ಬದಲಿಸಿ ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಪ್ರಜಾ ಪ್ರಭುತ್ವವಾದೀ ಸಮ್ಮಿಶ್ರ ಸರ್ಕಾರದ ಕರೆ ನೀಡಿತು. ಇದು ಆ ಸಂದರ್ಭದ ಪ್ರಮುಖ ಘೋಷಣೆಯೆಂದಿತು. ಮತ್ತೆ 1971ರಲ್ಲಿ ಬೂರ್ಜ್ವಾ ವರ್ಗದಲ್ಲಿ ಒಡಕು ಉಂಟಾಗಿದೆ, ಇಂದಿರಾಗಾಂಧಿ ಗುತ್ತೇದಾರಿ-ವಿರೋಧಿ ಬೂರ್ಜ್ವಾ ವಿಭಾಗವನ್ನು ಪ್ರತಿನಿಧಿಸುವುದರಿಂದ ಕಮ್ಯೂನಿಸ್ಟರು ಆಕೆಯನ್ನು ಬೆಂಬಲಿಸ ಬೇಕೆಂದು ನಿಲುವು ಬದಲಿಸಿತು. ಅಂತಿಮ ವಾಗಿ ಇದು ತುರ್ತುಪರಿಸ್ಥಿತಿಯ ಘೋಷಣೆ ಯನ್ನು ಬೆಂಬಲಿಸಿ, "ಫ್ಯಾಸಿಸ್ಟ್-ವಿರೋಧಿ ಸಮ್ಮೇಳನ" ನಡೆಸಿ ಬೂರ್ಜ್ವಾ ಆಳುವ ಪ್ರತಿನಿಧಿಗಳ ಪ್ರಜಾಪ್ರಭುತ್ವ-ವಿರೋಧಿ ಕೃತ್ಯ ಗಳನ್ನು ಗೌರವಾರ್ಹಗೊಳಿಸುವ ಮಟ್ಟದವರೆಗೂ ಹೋಯಿತು. ಕೇರಳದಲ್ಲಿ ಕಾಂಗ್ರೆಸ್ ಜತೆಗೆ ಸಮ್ಮಿಶ್ರ ಸರ್ಕಾರದಲ್ಲಿ ಭಾಗವಹಿಸಿತು. ತುರ್ತುಪರಿಸ್ಥಿತಿಯ ಅನುಭವ, ಜನತೆ ಯಿಂದ ಕಾಂಗ್ರೆಸ್(ಐ)ಗೆ ತಿರಸ್ಕಾರದ ನಂತರವೇ ಸಿ.ಪಿ.ಐ. ತನ್ನ ನಿಲುವಿನ ಬಗ್ಗೆ ಪುನರಾಲೋ ಚನೆ ನಡೆಸಲಾರಂಭಿಸಿತು.

ಕಾರ್ಯತಂತ್ರದಲ್ಲಿ ಕಂಡು ಬಂದ ಈ ಎಲ್ಲಾ ಬದಲಾವಣೆಗಳನ್ನು ಅದೇ ಹಳೆಯ ಕಾರ್ಯಕ್ರಮದ ಚೌಕಟ್ಟಿನಲ್ಲೇ ಸಮರ್ಥಿಸಿ ಕೊಳ್ಳಲು ಸಿ.ಪಿ.ಐ. ಮುಖಂಡರು ಯತ್ನಿಸಿ ದರು. ಇದಾದ ನಂತರ ಬಹಳ ವರ್ಷಗಳೇ ಕಳೆದವು. ಆದರೆ ಕಾರ್ಯಕ್ರಮದ ತಿಳುವಳಿಕೆ ಬಗ್ಗೆ ಯಾವುದೇ ಸಮಾನ ಅಭಿಪ್ರಾಯ ಮೂಡಿ ಬಂದಿಲ್ಲ. ಇದಕ್ಕೆ ಪ್ರಯತ್ನಿಸದೆ ಸಿ.ಪಿ.ಐ. ಮಾಡುವ ಐಕ್ಯತೆಯ ಘೋಷಣೆ ಎಡ ಐಕ್ಯತೆಯ ಬೆಂಬಲಿಗರ ಭಾವನೆಗಳನ್ನು ಕೆರಳಿಸುವ ಒಂದು ತಂತ್ರವೆಂದೇ ಹೇಳಬೇಕಾ ಗುತ್ತದೆ.

> ಬಹಳ ವರ್ಷಗಳೇ ಕಳೆದಿವೆ. ಕಾರ್ಯಕ್ರಮದ ತಿಳುವಳಿಕೆ ಬಗ್ಗೆ ಯಾವುದೇ ಸಮಾನ ಅಭಿಪ್ರಾಯ ಮೂಡಿ ಬಂದಿಲ್ಲ ಇದಕ್ಕೆ ಪ್ರಯ ತ್ನಿಸದೆ ಸಿ.ಪಿ.ಐ. ಮಾಡುವ ಐಕ್ಯ ತೆಯ ಘೋಷಣೆ ಎಡ ಐಕ್ಯತೆಯ ಬೆಂಬಲಿಗರ ಭಾವನೆ ಕೆರಳಿಸುವ ತಂತ್ರವೆಂದೇ ಹೇಳಬೇಕಾಗುತ್ತದೆ.

ಕಮ್ಯೂನಿಸ್ಟ್ ಐಕ್ಯತೆ ಬೂರ್ಜ್ವಾ ಪಕ್ಷಗಳ ಐಕ್ಯತೆಯಂತಲ್ಲ-ಇಂದು ಬಂತು ನಾಳೆ ಹೋಯಿತು ಎನ್ನುವಂತಹ ಐಕ್ಯತೆಯಲ್ಲ. ನಿರ್ದಿಷ್ಟ ನೀತಿಗಳ ಮೇಲೆ ನಿಲ್ಲಬೇಕಾದ ಐಕ್ಯತೆ ಅದು.

ಮೂಲಭೂತ ಪ್ರಶ್ನೆಗಳು

ಕಾರ್ಯಕ್ರಮ ರೂಪೀಕರಿಸುವುದು ಹೇಗೆ? ಭಾರತದಲ್ಲಿ ಕಮ್ಯೂನಿಸ್ಟ್ ಆಂದೋಲನ ರಚನೆಯಾದಂದಿನಿಂದ ಹಲವು ಕಾರ್ಯಕ್ರಮ ಕುರಿತ ದಸ್ತಾವೇಜುಗಳು ತಯಾರಾದವು. ಹೆಚ್ಚಿನವು ಸಮಯದ ಬರೆಗಲ್ಲಲ್ಲಿ ಸೋತವು. ಎರಡು ಅಂಶಗಳಲ್ಲಿ ಸೋತವು- 1) ಭಾರತದ ಮೂರ್ತ ವಾಸ್ತವತೆ ಗಮನಿಸುವಲ್ಲಿ ವಿಫಲತೆ 2) ಭಾರತೀಯ ಸಮಾಜದಲ್ಲಿ ಉತ್ಪಾದನಾ ಶಕ್ತಿಗಳ ಹಂತ ಮತ್ತು ಉತ್ಪಾದನಾ ಸಂಬಂಧಗಳ ನಡುವಿನ ಮೂಲಭೂತ ಸಂಘರ್ಷವನ್ನು, ಸಮಾಜದ ವಿವಿಧ ವರ್ಗಗಳ ಪಾತ್ರವನ್ನು ಸರಿಯಾಗಿ ಅಂದಾಜು ಮಾಡುವಲ್ಲಿ ವಿಫಲತೆ. ವಿಭಜನೆಯ ನಂತರವೇ ಈಗಿರುವ ಎರಡು ಪಕ್ಷಗಳ ಎರಡು ಕಾರ್ಯಕ್ರಮಗಳು ಅಸ್ತಿತ್ವಕ್ಕೆ ಬಂದವು.

ಪಕ್ಷದ ಕಾರ್ಯಕ್ರಮ ನಿರ್ಧರಿಸಬೇಕಾದ ಮೂಲಭೂತ ಪ್ರಶ್ನೆಗಳೆಂದರೆ-ಪ್ರಭುತ್ವದ ವರ್ಗ ಸ್ವಭಾವ, ಕ್ರಾಂತಿಯ ಘಟ್ಟ ಮತ್ತು ಕ್ರಾಂತಿಯ ಹಾದಿ. ಕ್ರಾಂತಿಯ ಘಟ್ಟ ಮತ್ತು ವರ್ಗಕೂಟದ ಬಗ್ಗೆ ಈ ಎರಡು ಕಾರ್ಯಕ್ರಮ ಗಳ ನಡುವೆ ಮೂಲಭೂತ ಭಿನ್ನಾಭಿಪ್ರಾಯ ವಿಲ್ಲ. ಆದರೆ ಪ್ರಭುತ್ವದ ವರ್ಗ ಸ್ವಭಾವದ ಪ್ರಶ್ನೆ ಮತ್ತು ಕ್ರಾಂತಿ ಮುನ್ನಡೆಸುವಲ್ಲಿ ವಿವಿಧ ವರ್ಗಗಳ ಪಾತ್ರದ ಬಗ್ಗೆ ಮೂಲಭೂತ

> ಕಮ್ಯೂನಿಸ್ಟ್ ಐಕ್ಯತೆ ಬೂರ್ಜ್ವಾ ಪಕ್ಷಗಳ ಐಕ್ಯತೆಯಂತಲ್ಲ. ಇಂದು ಬಂತು, ನಾಳೆ ಹೋಯಿತು ಎನ್ನು ವಂತಹ ಐಕ್ಯತೆಯಲ್ಲ. ನಿರ್ದಿಷ್ಟ ನೀತಿಗಳ ಮೇಲೆ ನಿಲ್ಲಬೇಕಾದ ಐಕ್ಯತೆ ಇದು.

ಭಿನ್ನತೆಗಳಿವೆ.

25 ವರ್ಷಗಳಿಗೂ ಹೆಚ್ಚು ಕಾಲದ ಅನುಭವದ ಆಧಾರದ ಮೇಲೆ ಈ ಮೂಲ ಭೂತ ಪ್ರಶ್ನೆಗಳ ಬಗ್ಗೆ ಸಿ.ಪಿ.ಐ. ಬೇರೆಯೇ ತೀರ್ಮಾನಕ್ಕೆ ಬರುತ್ತದೆಂದು ನಿರೀಕ್ಷಿಸಿದ್ದೆವು. ಆದರೆ ಹದಿನಾಲ್ಕನೇ ಸಿ.ಪಿ.ಐ. ಮಹಾಧಿವೇಶನ ಕ್ಕಾಗಿ ರಚಿಸಿದ "ಕಾರ್ಯಕ್ರಮ ಆಯೋಗ" ರೂಪಿ ಸಿದ ಕರಡು ಕಾರ್ಯಕ್ರಮ (ಸಿ.ಪಿ.ಐ. ರಾಷ್ಟ್ರೀಯ ಮಂಡಳಿ ಇದನ್ನು ಇನ್ನೂ ಚರ್ಚಿಸಿಲ್ಲ) ಇಂತಹ ಯಾವ ಮೂಲಭೂತ ಬದಲಾವಣೆ ಯನ್ನು ಮಾಡಿಲ್ಲ. ಹಿಂದಿನ ಚೌಕಟ್ಟು ಹಾಗೇ ಉಳಿದಿದೆ. ಇದನ್ನು ಪರಿಶೀಲಿಸೋಣ.

ಪ್ರಭುತ್ವದ ವರ್ಗ ಸ್ವಭಾವ

195 5 ರಿಂದಲೇ ಅವಿಭಜಿತ ಕಮ್ಯೂನಿಸ್ಟ್ ಪಕ್ಷದಲ್ಲಿ ಈ ಪ್ರಶ್ನೆಯ ಬಗ್ಗೆ ಚರ್ಚೆ ನಡೆ ಯುತ್ತಾ ಬಂತು. ಆಗಿನ ಕೇಂದ್ರ ಸಮಿತಿ ಪ್ರಭುತ್ವ ಹಿರೇ ಬೂರ್ಜ್ವಾ ವರ್ಗದ ನೇತೃತ್ವದಲ್ಲಿ ರುವ ಬೂರ್ಜ್ವಾ-ಭೂಮಾಲಕ ಕೂಟದ ಪ್ರಭುತ್ವ ಎಂಬ ತೀರ್ಮಾನಕ್ಕೆ ಬಂತು. ಆಂತರಿಕ ಚರ್ಚೆಯ ನಂತರ ಪಾಲ್ಘಾಟ್‌ನಲ್ಲಿ ನಡೆದ ನಾಲ್ಕನೇ ಮಹಾಧಿವೇಶನದಲ್ಲಿ ಇದನ್ನು ಸ್ವೀಕರಿಸಲಾಯಿತು. ಆದರೆ ಈ ಆಳುವ ಕೂಟದ ಮುಖಂಡತ್ವದ ಪ್ರಶ್ನೆಯನ್ನು ವಿವರಿಸಲಿಲ್ಲ. ಈ ನಡುವೆ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಆಂದೋಲನದ ದಸ್ತಾವೇಜು ಗಳಿಂದ "ರಾಷ್ಟ್ರೀಯ ಪ್ರಜಾಪ್ರಭುತ್ವ" "ಬಂಡವಾಳ ಶಾಹಿಯೇತರ ಮಾರ್ಗ" ಎಂಬ ಪರಿಕಲ್ಪನೆಗಳು ಬಂದಿದ್ದವು. ಆದರೆ ನಾಲ್ಕನೇ ಮಹಾಧಿವೇಶನ ಇದನ್ನು ಒಪ್ಪಲಿಲ್ಲ. "ಜನತಾ ಪ್ರಜಾಪ್ರಭುತ್ವ" ಮತ್ತು ಕಾರ್ಮಿಕ ವರ್ಗದ ನೇತೃತ್ವದ 'ಜನತಾ' ಪ್ರಜಾಪ್ರಭುತ್ವ ರಂಗ'ದ ಘೋಷಣೆಯನ್ನು ಅದು ಕೊಟ್ಟಿತು.

ವಿಭಜನೆಯ ನಂತರ ಸಿ.ಪಿ.ಐ.(ಎಂ) ಈ ತಿಳುವಳಿಕೆಗೆ ಬದ್ಧವಾಗಿ ಮುಂದುವರಿದರೆ

> ಮೂಲಭೂತ ಭಿನ್ನಾಭಿಪ್ರಾಯ ಗಳನ್ನು ಪರಿಹರಿಸಿಕೊಳ್ಳದ ಕಮ್ಯೂನಿಸ್ಟ್ ಐಕ್ಯತೆಯಿಂದ ಕ್ರಾಂತಿಯ, ಪಕ್ಷದ ಕಾರ್ಯಕ್ರಮದ ಕ್ರಾಂತಿಕಾರಿ ತಿಳುವಳಿಕೆ ಪೇಲವಗೊ ಳ್ಳುತ್ತದೆ ಆದ್ದರಿಂದಲೇ ನಮ್ಮ ಪಕ್ಷ ಕಾರ್ಯಾಚರಣೆಯಲ್ಲಿ ಐಕ್ಯತೆಯ ಮೇಲೆ ಒತ್ತು ನೀಡುತ್ತದೆ.

ಸಿ.ಪಿ.ಐ. ಭಾರತೀಯ ಪ್ರಭುತ್ವ ಇಡೀ ಬೂರ್ಜ್ವಾ ವರ್ಗದ ಪ್ರಭುತ್ವ ಎಂದು ಹೇಳಿ ಆ ನಿರೂಪಣೆಯನ್ನು ಬದಲಿಸಿತು. ಈಗಲೂ ಯಾವುದೇ ರೀತಿಯಲ್ಲಿ ದೇಶದ ಪರಿಸ್ಥಿತಿ ಯನ್ನು ವಿಶ್ಲೇಷಿಸಿದರೂ ಈ ರೀತಿಯ ಅರ್ಥ್ಯಸುವಿಕೆಯನ್ನು ಸಮರ್ಥಿಸಿಕೊಳ್ಳುವುದು ಕಷ್ಟ.

14ನೇ ಸಿ.ಪಿ.ಐ. ಮಹಾಧಿವೇಶನಕ್ಕಾಗಿ ತಯಾರಿಸಿದ ಕರಡು ಕಾರ್ಯಕ್ರಮ ಭಾರತೀಯ ಬೂರ್ಜ್ವಾ ವರ್ಗ ಸಮರಸ ಪೂರ್ಣ ವರ್ಗ ವೇನಲ್ಲ. ಆದರಲ್ಲೂ ಭಿನ್ನತೆಗಳು ಬೆಳೆದು ಬರುತ್ತಿವೆಯೆಂಬುದು ಗಮನಾರ್ಹ ಎನ್ನು ತ್ತದೆ. ಗುತ್ತೇದಾರಿ ಬೂರ್ಜ್ವಾಗಳ ಕೈಯಲ್ಲಿ ಆರ್ಥಿಕ ಶಕ್ತಿ ಮತ್ತು ಬಂಡವಾಳದ ಕೇಂದ್ರೀ ಕರಣದಿಂದ ಹೀಗಾಗಿದೆ; ಇದು ಜನ ಸಮೂಹ ಗಳ ಮಾತ್ರವಲ್ಲ ರಾಷ್ಟ್ರೀಯ ಬೂರ್ಜ್ವಾ ವರ್ಗದ ಬಹುಪಾಲು ವಿಭಾಗಗಳ ಹಿತಾಸಕ್ತಿಗೂ ಧಕ್ಕೆ ತಂದಿದೆ- ಎಂಬೆಲ್ಲಾ ಅಂಶಗಳ ಮೇಲೆ ಒತ್ತು ನೀಡಲು ಇಡೀ ಪರಿಚ್ಛೇದಗಳನ್ನೇ ಮೀಸಲಿಟ್ಟಿದೆ. (ಪರಿಚ್ಛೇದ 95 ಮತ್ತು129) ಇಷ್ಟೆಲ್ಲಾ ಹೇಳಿದ ಮೇಲೂ ಈ ಕರಡು ಕಾರ್ಯಕ್ರಮ ಕೂಡಾ ಭಾರತೀಯ ಪ್ರಭುತ್ವ ಇಡೀ ಬೂರ್ಜ್ವಾ ವರ್ಗದ ಪ್ರಭುತ್ವ, ಗುತ್ತೇ ದಾರಿ ಬೂರ್ಜ್ವಾ ವರ್ಗ ಅದರಲ್ಲಿ ಶಕ್ತಿಶಾಲೀ ಪ್ರಭಾವ ಹೊಂದಿದೆಯಷ್ಟೇ ಎಂಬ ಹಳೆಯ ನಿರೂಪಣೆಯನ್ನೇ ಪುನರುಚ್ಚರಿಸಿದೆ. ಸಿ.ಪಿ.ಐ. ಮುಖಂಡತ್ವದ ಈ ನಿಲುವು ಅರ್ಥವಾಗುವು ದಿಲ್ಲ. ಈ ರೀತಿಯ ನಿರೂಪಣೆ ಮತ್ತೆ ಕಾಂಗ್ರೆಸ್‌ನೊಂದಿಗೆ ಸಿ.ಪಿ.ಐ. ಸಹಕರಿಸುವುದಕ್ಕೆ ಹಾದಿ ಮಾಡಿಕೊಡುವ ಅಪಾಯವಿದೆ ಎಂಬುದನ್ನು ಇಲ್ಲಿ ಗಮನಿಸ ಬೇಕಾಗುತ್ತದೆ.


ಭೂಮಾಲೀಕರ ಸ್ಥಾನವೇನು?

ಕರಡು ಕಾರ್ಯಕ್ರಮದ 121ನೇ ಪರಿಚ್ಛೇದ ಕಾಂಗ್ರೆಸ್ ಭೂಸುಧಾರಣೆಯ, ಅಂದರೆ ಬೂರ್ಜ್ವಾ ಪ್ರಭುತ್ವದ ಭೂಶಾಸನಗಳ ನಿರ್ದಿಷ್ಟ ಸ್ವರೂಪವನ್ನು ಒತ್ತಿ ಹೇಳುತ್ತದೆ. ಈ ಶಾಸನ "ಗ್ರಾಮೀಣ ಜನ ಸಮೂಹಗಳ ಮಹತ್ವದ ದೊಡ್ಡ ಪ್ರಮಾಣದ ವಿಭಾಗದ ಹಿತಾಸಕ್ತಿ ಗಳನ್ನು" ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದೆ ಎಂದು ಹೇಳಿರುವ ಈ ಕರಡು ಗ್ರಾಮೀಣ ಸಮುದಾಯದ 40%ದಷ್ಟು ವಿಭಾಗಗಳ ಬಂಡವಾಳಶಾಹೀ ಶೋಷಣೆ ಮತ್ತು ಸಾಮಾಜಿಕ ದಮನವನ್ನು ಈ ಶಾಸನಗಳು ಎತ್ತಿ ಹಿಡಿ ಯುತ್ತವೆ ಎಂದಿದೆ.

ಇದರಿಂದ ಭೂಮಾಲಿಕರು ಬೂರ್ಜ್ವಾ ಗಳೊಂದಿಗೆ ವರ್ಗಕೂಟ ಮಾಡಿಕೊಂಡಿದ್ದಾರೆ, ಪ್ರಭುತ್ವದ ಮೇಲೆ ಹತೋಟಿ ಹೊಂದಿದ್ದಾರೆ ಎಂಬುದು ಸಹಜ ತೀರ್ಮಾನವಾಗಬೇಕಿತ್ತು. ಆದರೆ ಸಿ.ಪಿ.ಐ.ನ ಈ ಕರಡಿನಲ್ಲಿ ಕೂಡಾ ಅದು ಹೇಗೆ ತಪ್ಪಿ ಹೋಯಿತು? ಬೂರ್ಜ್ವಾ ವರ್ಗ ಆಳ್ವಿಕೆ ಭೂಮಾಲಕರೊಂದಿಗೆ "ಬಲವಾದ ಸಂಬಂಧ" ಹೊಂದಿದೆ ಎಂಬ ಹಿಂದಿನ ನಿರೂ ಪಣೆಯನ್ನೇ ಈ ಕರಡು ಕೂಡಾ ಪುನರುಚ್ಚ ರಿಸಿದೆ.

1985 ರಲ್ಲಿ ಕಾ॥ ರಾಜೇಶ್ವರರಾವ್ ಎರಡು ಕಾರ್ಯಕ್ರಮಗಳ ಬಗ್ಗೆ ಹೇಳುತ್ತಾ "ಈ ಎರಡರ ವಿಶ್ಲೇಷಣೆಗಳಲ್ಲಿ ಸೂಕ್ಷ್ಮ ವ್ಯತ್ಯಾಸವಿದೆ. ಆದರೂ ಎರಡರಲ್ಲೂ ಪ್ರಭುತ್ವದ ವರ್ಗ ಸಂರಚನೆಯನ್ನು ಒಂದೇ ರೀತಿಯಲ್ಲಿ ಕಾಣಲಾಗಿದೆ" ಎಂದಿದ್ದರು. "ಪ್ರತಿಯೊಂದು ಪ್ರಭುತ್ವವೂ ಒಂದೇ ವರ್ಗದ ಪ್ರಭುತ್ವ ಎಂಬುದು ನಮ್ಮ ವಿಚಾರ. ಇಲ್ಲಿ ಭೂ ಮಾಲೀಕರು. ಇಡೀ ಬೂರ್ಜ್ವಾ ವರ್ಗದ ಪ್ರಭು ತ್ವದ ಮಿತ್ರರು" ಎಂದು ಅವರು ವಾದಿಸಿ ದ್ದರು.

ದೀರ್ಘ ಚರ್ಚೆಯ ನಂತರ ಭೂಮಾಲಕರು ಪ್ರಭುತ್ವದ ಮಿತ್ರರು ಎಂಬ ಅಂಶವನ್ನಂತೂ ಅವರು ಒಪ್ಪಿಕೊಂಡಿದ್ದಾರೆ ಎಂಬುದು ಇಲ್ಲಿ ಸ್ಪಷ್ಟ. ಆದರೆ ಆಲ್ಲೂ ಪ್ರಭುತ್ವದ ಮುಖಂಡತ್ವ ಯಾರ ಕೈಯಲ್ಲಿದೆ



ಹರ್ಕಿಶನ್‌ಸಿಂಗ್ ಸುರ್ಜಿತ್

ಎಂಬ ಪ್ರಶ್ನೆಗೆ ಉತ್ತರ ನೀಡುವುದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರು. ಸ್ವಾತಂತ್ರ್ಯಾ ನಂತರ ಗುತ್ತೇದಾರಿಗಳ ಬಲ ಹೆಚ್ಚಿ ಇತರ ಬೂರ್ಜ್ವಾ ವಿಭಾಗಗಳು ಬೆಕ್ಕಟ್ಟನತ್ತ ತಳ್ಳಲ್ಪಟ್ಟ ಧೋರಣೆಗಳನ್ನು ರೂಪಿಸಿದ ವಿಭಾಗವಾದರೂ ಯಾವುದು? ಮೂಲಭೂತ ವಾಗಿ ಯಾರ ಹಿತಾಸಕ್ತಿಗಳನ್ನು ಪ್ರಭುತ್ವ ಪ್ರೋತ್ಸಾಹಿಸಿದೆ?

"ಹಿರಿ ಬೂರ್ಜ್ವಾ ವರ್ಗ ಶಕ್ತಿಶಾಲಿ ಪ್ರಭಾವ ಹೊಂದಿದೆ, ಆದರೆ ಪ್ರಭುತ್ವದ ಮೇಲೆ ಪೂರ್ಣ ನಾಯಕತ್ವ ಹೊಂದಿಲ್ಲ" ಎಂಬ ತಮ್ಮ ವಿಶ್ಲೇಷಣೆಯ ಮೂಲಕ ಭಾರತ ಸರ್ಕಾರದ ವಿದೇಶಾಂಗ ನೀತಿಯನ್ನು ವಿವರಿ ಸಲು ಸಾಧ್ಯವಾಗಿದೆ ಎಂದು ರಾಜೇಶ್ವರರಾವ್ ಹೇಳಿದ್ದರು.

ವಿದೇಶಾಂಗ ನೀತಿಯ ಸ್ವರೂಪವನ್ನು ಸಿ.ಪಿ.ಐ.(ಎಂ) ಕಾರ್ಯಕ್ರಮದ 108ನೇ ಪರಿಚ್ಛೇದ ಬೇರೆ ರೀತಿಯಲ್ಲೇ ಸ್ಪಷ್ಟವಾಗಿ ಆದಾಗಲೇ ವಿವರಿಸಿದೆ.

ಹಿರಿ ಬೂರ್ಜ್ವಾ ವರ್ಗವು ಸೇರಿದಂತೆ ಇಡೀ ಭಾರತೀಯ ಬೂರ್ಜ್ವಾವರ್ಗ ಮತ್ತು ಸಾಮ್ರಾಜ್ಯಶಾಹೀ ನಡುವೆ ಕೆಲವು ವಿಷಯಗಳ ಮೇಲೆ ತಿಕ್ಕಾಟ, ವೈರುಧ್ಯಗಳಿವೆ, ಎಂದಿರುವ ನಮ್ಮ ಕಾರ್ಯಕ್ರಮದ ಈ ಪರಿಚ್ಛೇದದಲ್ಲಿ ಕೊನೆಯಲ್ಲಿ ಹೀಗೆ ಹೇಳಲಾಗಿದೆ-"ಆಳುವ ಕಾಂಗ್ರೆಸ್ ಪಕ್ಷದೊಂದಿಗೆ ಯಾವುದೇ ಐಕ್ಯತೆ ಅಥವಾ ಸಂಯುಕ್ತ ರಂಗದ ಯಾವುದೇ ಭ್ರಮೆಯನ್ನು ಇಟ್ಟುಕೊಳ್ಳದೆ ಕಾರ್ಮಿಕವರ್ಗ ವಿಶ್ವಶಾಂತಿ, ವಸಾಹತುಶಾಹಿ-ವಿರೋಧದ ಎಲ್ಲಾ ಪ್ರಶ್ನೆಗಳ ಮೇಲೆ ದೇಶದ ನಿಜವಾದ ಹಿತಾಸಕ್ತಿಗೆ ಪೂರಕವಾದ, ಸಾಮ್ರಾಜ್ಯಶಾಹಿಯೊಂದಿಗೆ ಸಂಘ ರ್ಷದ ಎಲ್ಲಾ ರಾಜಕೀಯ, ಆರ್ಥಿಕ ಪ್ರಶ್ನೆಗಳ ಮೇಲೆ, ನಮ್ಮ ಸಾರ್ವಭೌಮತೆಯನ್ನು ಸ್ವತಂತ್ರ ವಿದೇಶಾಂಗ ನೀತಿಯನ್ನು ಬಲಗೊಳಿ ಸುವ ಎಲ್ಲ ಪ್ರಶ್ನೆಗಳ ಮೇಲೆ ಸರ್ಕಾರಕ್ಕೆ ಬೆಂಬಲ ನೀಡಲು ಹಿಂಜರಿಯುವುದಿಲ್ಲ".

ಆದರೆ ಹಿರಿ ಬೂರ್ಜ್ವಾ ವರ್ಗಕ್ಕೆ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಯ ರಕ್ಷಣೆಯಲ್ಲಿ,

ಶಾಂತಿಯಲ್ಲಿ ಆಸಕ್ತಿ ಇಲ್ಲ ಎಂಬ ತೀರ್ಮಾ ನಕ್ಕೆ ಸಿ.ಪಿ.ಐ. ಯಾವಾಗ ಬಂತೋ!

ಸ್ವಾತಂತ್ರ್ಯದಿಂದೀಚೆಗೆ ಸರ್ಕಾರ ಅನುಸರಿಸಿ ಕೊಂಡು ಬಂದ ಧೋರಣೆಗಳಲ್ಲಿ ಪ್ರತಿಫಲನ ಗೊಂಡ ವಿವಿಧ ವರ್ಗಗಳ ಪಾತ್ರ ಮತ್ತು ಸದ್ಯದ ಸನ್ನಿವೇಶದ ಮೂರ್ತ ವಿಶ್ಲೇಷಣೆಯ ಆಧಾರದ ಮೇಲೆ ಪ್ರಭುತ್ವದ ಸ್ವರೂಪದ ನಿರೂಪಣೆಯನ್ನು ನಾವು ಮಾಡಿದ್ದೇವೆ.

ಸಿ.ಪಿ.ಐ.ನ ಪ್ರಸ್ತುತ ಕರಡು ಕಾರ್ಯಕ್ರಮ ಪ್ರಭುತ್ವದ ಮುಖಂಡತ್ವ ವಹಿಸಿರುವವರು ಯಾರು. ಕ್ರಾಂತಿ ಯಾರ ವಿರುದ್ಧ ಇರಬೇಕು ಎಂಬ ಪ್ರಶ್ನೆಗೆ ಉತ್ತರ ನೀಡಿಲ್ಲ. ಈ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡಿದ್ದರೆ ವರ್ಗ ಶಾಮೀಲಿಗೆ ಅವಕಾಶವೇ ಉಳಿಯುವುದಿಲ್ಲ.

"ಬಂಡವಾಳಶಾಹೀಯೇತರ ಹಾದಿ"

ಮೊದಲೇ ಹೇಳಿದಂತೆ ಇದು ನಮ್ಮ ದೇಶದ ಮೂರ್ತ ಪರಿಸ್ಥಿತಿಗಳ ಅಧ್ಯಯನ ಮಾಡದೆ 1960ರ 81ಪಕ್ಷಗಳ ಘೋಷಣೆ ಯಿಂದ ಆಮದು ಮಾಡಿಕೊಂಡ ಪರಿಕಲ್ಪನೆ. ಬಂಡವಾಳಶಾಹೀ ಬೆಳೆದಿರದ, ಕಾರ್ಮಿಕ ವರ್ಗವು ಸಂಖ್ಯೆಯಲ್ಲಿ ಬಲವಾಗಿರದ ಹಿಂದು ಳಿದ ನವವಿಮೋಚಿತ ದೇಶಗಳಿಗೆ ಅನ್ವಯವಾ ಗುವ ಪರಿಕಲ್ಪನೆ ಇದು. ಪ್ರಜಾಪ್ರಭುತ್ವವಾದ ಜನತೆ ಇಂತಹ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಯನ್ನು ಹೊಡೆದೋಡಿಸಿ ಸಮಾಜವಾದೀ ದೇಶ ಗಳ ನೆರವಿನಿಂದ ಬಂಡವಾಳಶಾಹೀ ಮಾರ್ಗ ವನ್ನು ಬಿಟ್ಟು ಬೇರೆ ಮಾರ್ಗ ಅನುಸರಿಸುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಿರುವ ಈ ಪರಿಕಲ್ಪನೆ ನಮ್ಮ ದೇಶಕ್ಕೆ ಅನ್ವಯವಾಗುವು ದಿಲ್ಲ.

ಯಾಕೆಂದರೆ ವಸಾಹತುವಾಗಿದ್ದಾಗಲೇ ಬಂಡವಾಳಶಾಹೀ ಬೆಳವಣಿಗೆಯನ್ನು ಭಾರತ ಕಂಡಿತ್ತು. ಸ್ವಾತಂತ್ರ್ಯದ ನಂತರ ಗುತ್ತೇದಾರ ಗಳು ಅತಿ ವೇಗದಿಂದ ಬೆಳೆದವು. ಗುತ್ತೇದಾರ ಮನೆತನಗಳ ಆಸ್ತಿ ಮಾತ್ರವಲ್ಲ, ಸಂಖ್ಯೆಯೂ ಹೆಚ್ಚಿತು. ಅವರೀಗ ಸರ್ಕಾರದ ಧೋರಣ ಗಳನ್ನು ಬಹಿರಂಗವಾಗಿಯೇ ಪ್ರಭಾವಿತಗೊಳಿ ಸಲು ಶಕ್ತರಾಗಿದ್ದಾರೆ. ಇದಲ್ಲದೆ ಇವರಿಗೆ ಬ್ರಿಟೀಷರು ಸುವ್ಯವಸ್ಥಿತ ಪ್ರಭುತ್ವ ಯಂತ್ರ ಬಿಟ್ಟು ಹೋದರು. ಅದನ್ನೀಗ ವರ್ಗ ಆಳ್ವಿ ಕೆಯ ಅಸ್ತ್ರವಾಗಿ ಬೆಳೆಸಲಾಗಿದೆ.

ಇಂತಹ ಸ್ಥಿತಿಯಲ್ಲಿ ಆಳುವ ವರ್ಗ ಗಳು ಕಾರ್ಮಿಕ ವರ್ಗದೊಂದಿಗೆ ಅಧಿಕಾರ ಹಂಚಿಕೊಳ್ಳಲು ಸಿದ್ಧವಾಗುತ್ತವೆ ಎಂದು ನಿರೀಕ್ಷಿಸುವುದು ಸಂಪೂರ್ಣವಾಗಿ ಅವಾಸ್ತವ ಕಾರ್ಮಿಕ ವರ್ಗದ ನೇತೃತ್ವದ ಪಾತ್ರವಿಲ್ಲದ ವರ್ಗ ಮೈತ್ರಿಯ ಮೂಲಕ ಭಾರತದಲ್ಲಿ ಕ್ರಾಂತಿ ಯಶಸ್ವಿಯಾಗಬಹುದೆಂದು ಯೋಚಿ ಸುವುದು ಮಾರ್ಕ್ಸ್‌ವಾದದ ಮೂಲಭೂತ ವಿಚಾರಗಳ ಬಗ್ಗೆ ಅಜ್ಞಾನವನ್ನು ತೋರಿಸು ದವೆ.

...ಕಾರ ಹೇಳದ ...ಘೋಷಣೆ ...ಅರ್ಥಹೀನ

...ಆರಂಭದಲ್ಲಿ, ಅದರ ಮೊದಲಿನ ಸಿದ್ಧತೆ ... ಕಮ್ಯೂನಿಸ್ಟ್ ಐಕ್ಯತೆಯ ಪ್ರಶ್ನೆ ಎತ್ತಿದ್ದಾರೆ. ...ಗ ಈ ಪ್ರಶ್ನೆಯತ್ತ ಗಮನಹರಿಸುವುದನ್ನು ...ಡಿಕೊಂಡಿದ್ದಾರೆ. ದೇಶದ ಎಡ ಪಂಥೀಯ ...ವೆ. ಇದರಿಂದ ದೇಶದ ಈಗಿನ ಸದ್ಯದ ಕ್ಲಿಷ್ಟ ... ಕಮ್ಯೂನಿಸ್ಟರಿಗೆ ನೆರವಾಗುವುದು ಎಂದು ... ಪಕ್ಷಗಳೂ ಆಗಾಗ ಇಂತಹ ಭಾವನೆ ವ್ಯಕ್ತಪಡಿ...

ಕಾ॥ ಹರ್ಕಿಷನ್‌ಸಿಂಗ್ ಸುರ್ಜಿತ್ ಈ ...ಸಿ.ಐ. ತನ್ನ ಹದಿನಾಲ್ಕನೇ ಮಹಾಧಿವೇಶನಕ್ಕಾಗಿ ... ಇಲ್ಲಿ ವಿವರಿಸಿದ್ದಾರೆ.

ಸಿ.ಪಿ.ಐ.ನ ಪ್ರಸ್ತುತ ಕರಡು ಕಾರ್ಯಕ್ರಮ ಭಾರತದಲ್ಲಿ ಬಂಡವಾಳಶಾಹಿಯೇತರ ಹಾದಿಯ ಪರಿಕಲ್ಪನೆಯನ್ನು ಈಗ ತ್ಯಜಿಸಿದೆ. ಹೀಗೆ ತ್ಯಜಿಸಲು ಅದು ನೀಡಿರುವ ಕಾರಣ- "ಆಗ ಈ ಪರಿಕಲ್ಪನೆ ಸಮಂಜಸವಾಗಿತ್ತು, ಈಗ ಇಲ್ಲ". ಇಂದಿನ ನಿರೂಪಣೆ ತಪ್ಪಾಗಿತ್ತು ಎಂದು ಹೇಳುವ ಧೈರ್ಯ ಸಿ.ಪಿ.ಐ.ಗಿಲ್ಲವಾದರೆ ಅದರ ಮಾರ್ಕ್ಸ್‌ವಾದಿ ತಿಳುವಳಿಕೆ ಬಗ್ಗೆ ಹೇಗೆ ತಾನೇ ವಿಶ್ವಾಸ ಮೂಡಲು ಸಾಧ್ಯ?

> ಸಿ.ಪಿ.ಐ.ನ ಪ್ರಸ್ತುತ ಕರಡು ಕಾರ್ಯಕ್ರಮ ಪ್ರಭುತ್ವದ ಮುಖಂಡತ್ವ ವಹಿಸಿರುವವರು ಯಾರು, ಕ್ರಾಂತಿ ಯಾರ ವಿರುದ್ಧವಿರಬೇಕು ಎಂಬ ಪ್ರಶ್ನೆಗೆ ಉತ್ತರ ನೀಡಿಲ್ಲ. ಈ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡಿದ್ದರೆ ವರ್ಗ ಶಾಮೀಲಿಗೆ ಅವಕಾಶವೇ ಉಳಿಯುವುದಿಲ್ಲ.

ಅಲ್ಲ! ಸಿ.ಪಿ.ಐ. ಈಗಲೂ "ರಾಷ್ಟ್ರೀಯ ಪ್ರಜಾಪ್ರಭುತ್ವ"ದ ಘೋಷಣೆಗೆ ಅಂಟಿಕೊಂಡಿದೆ. ಈ ಮೂಲಕ ತನ್ನ ಕಾರ್ಯಕರ್ತರನ್ನೇ ತಪ್ಪು ದಾರಿಯಲ್ಲಿ ಕೊಂಡು ಹೋಗುತ್ತದಷ್ಟೆ. ಈ ಘೋಷಣೆಗೆ ಇನ್ನೂ ಅಂಟಿಕೊಂಡಿರುವಾಗ ಕರಡು ಕಾರ್ಯಕ್ರಮ ಕ್ರಾಂತಿ ಮುನ್ನಡೆಸುವ ಬಗ್ಗೆ ತಪ್ಪು ಮಾರ್ಗ ನಿರ್ದೇಶನ ನೀಡಿದ್ದರೆ ಅದು ಕೇವಲ ಆಕಸ್ಮಿಕವಲ್ಲ. ಪ್ರಭುತ್ವ ಇನ್ನುಮುಂದೆ ಬೂರ್ಜ್ವಾ ವರ್ಗದ ವರ್ಗ ಆಳ್ವಿಕೆಯ ಅಂಗವಾಗಿರುವುದಿಲ್ಲ, ಬೂರ್ಜ್ವಾ ವರ್ಗ ಅಧಿಕಾರದ ಮೇಲೆ ಹೊಂದಿರುವ ಗುತ್ತೇದಾರಿಕೆ ಅಂತ್ಯವಾಗುತ್ತದೆ ಎಂದು ಈ ಕರಡಿನ 15 8ನೇ ಪರಿಚ್ಛೇದ ಹೇಳುತ್ತದೆ. ಮುಂದುವರಿದು "ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗದ ಕೈಯಲ್ಲಿನ ರಾಷ್ಟ್ರೀಯ ಪ್ರಜಾಪ್ರಭುತ್ವ ಒಂದು ಸಂಕ್ರಮಣ ಘಟ್ಟ. ಈ ಘಟ್ಟದಲ್ಲಿ ಸಾಮ್ರಾಜ್ಯಶಾಹೀ ಹಿತಾಸಕ್ತಿಗಳನ್ನು, ನಿರ್ಮೂಲನ ಮಾಡಲು, ಅರೆ-ಊಳಿಗಮಾನ್ಯ ಶಕ್ತಿಗಳನ್ನು ಪರಾಭವಗೊಳಿಸಲು, ಗುತ್ತೇದಾರಿಗಳ ಶಕ್ತಿ ಮುರಿಯಲು ಆಸಕ್ತವಾಗಿರುವ ಎಲ್ಲ ವರ್ಗಗಳು ಜಂಟಿಯಾಗಿ ಅಧಿಕಾರ ಚಲಾಯಿಸುತ್ತವೆ" ಎನ್ನುತ್ತದೆ ಈ ಪರಿಚ್ಛೇದ.

ಇಷ್ಟೇ ಅಲ್ಲ, ಈ ಪ್ರಕ್ರಿಯೆಯಲ್ಲಿ ಸಮತೋಲನ ಸತತವಾಗಿ ಕಾರ್ಮಿಕ-ರೈತ ಸಖ್ಯತೆಯತ್ತ ವಾಲುತ್ತದೆ. ಸಮಾಜವಾದದತ್ತ ಹೋಗಲು ಸನ್ನಿವೇಶ ಸಿದ್ಧವಾಗುತ್ತದೆ ಎಂದು ಪರಿಚ್ಛೇದ 161ರಲ್ಲಿ ಹೇಳಲಾಗಿದೆ.

ಅಂದರೆ ಯಾವ ವ ರ್ಗವೂ ನೇತೃತ್ವದ ಸ್ಥಾನದಲ್ಲಿ ಇರದ, ಎಲ್ಲಾ ವರ್ಗಗಳೂ ಜಂಟಿಯಾಗಿ ಅಧಿಕಾರ ಚಲಾಯಿಸುವ ಒಂದು ರಂಗದ ಪರಿಕಲ್ಪನೆಯನ್ನು ಸಿ.ಪಿ.ಐ. ಇನ್ನೂ ಇಟ್ಟುಕೊಂಡಿದೆಯೆಂದಾಯಿತು. ಇದು ಸಾಮಾಜಿಕ-ಪ್ರಜಾಪ್ರಭುತ್ವವಾದೀ ತಿಳುವಳಿಕೆಯೇ ಹೊರತು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ತಿಳುವಳಿಕೆಯಲ್ಲ. ಆಚರಣೆಯಲ್ಲಿ ಇದರರ್ಥ ಕ್ರಾಂತಿಯ ಪಾತ್ರವನ್ನೇ ತ್ಯಜಿಸಿದಂತೆ.

ಸಿ.ಪಿ.ಐ. ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗದಲ್ಲಿ, ಕಾರ್ಮಿಕ-ರೈತ ಸಖ್ಯತೆಯ ಮಹತ್ವವನ್ನು ಒತ್ತಿ ಹೇಳುತ್ತಾ ಸಾಗುತ್ತದೆ. ಆದರೆ ಕಾರ್ಮಿಕ ವರ್ಗ ನೇತೃತ್ವದ ಪಾತ್ರ ವಹಿಸಲು ಸಾಧ್ಯವಾದಾಗ ಮಾತ್ರವೇ ಕಾರ್ಮಿಕ-ರೈತ ಸಖ್ಯತೆ ಕಟ್ಟಬಹುದು ಎಂಬುದನ್ನು ತಿಳಿಯಲು ಅದು ವಿಫಲಗೊಂಡಿದೆ.

ವಾಸ್ತವವಾಗಿ ಕಾರ್ಮಿಕ-ರೈತ ಮಿತ್ರತ್ವದ ಆಧಾರದ ಮೇಲೆ ಪ್ರಜಾಪ್ರಭುತ್ವ ವರ್ಗ ಕೂಟ, ಅದರಲ್ಲಿ ಕಾರ್ಮಿಕ ವರ್ಗದ ನೇತೃತ್ವ-ಇಟ್ಟಿದ್ದಲ್ಲದೆ ಯಾವ ಕ್ರಾಂತಿಯೂ ಇದುವರೆಗೆ ಸಫಲವಾಗಿಲ್ಲ. ಇದು ವಿವಿಧ ದೇಶಗಳ ಅನುಭವ ಹಾಗೂ ಸಮಗ್ರ ತಿಳುವಳಿಕೆ.

ಸಿ.ಪಿ.ಐ.ನ ಪ್ರಸ್ತುತ ಕರಡು ಕಾರ್ಯಕ್ರಮದ ಇತರ ಅಂಶಗಳನ್ನು ಪರಿಶೀಲಿಸುವುದು ಅತ್ಯಗತ್ಯ. ಮೂಲಭೂತ ಭಿನ್ನಾಭಿಪ್ರಾಯಗಳನ್ನು, ವಿವಾದಗಳನ್ನು ಪರಿಹರಿಸಿಕೊಳ್ಳದೆ ಕಮ್ಯೂನಿಸ್ಟ್ ಐಕ್ಯತೆ ಅಸಾಧ್ಯ. ಯಾಕೆಂದರೆ ಇಂತಹ ಐಕ್ಯತೆಯಿಂದ ಕ್ರಾಂತಿಯ, ಪಕ್ಷದ ಕಾರ್ಯಕ್ರಮದ ಕ್ರಾಂತಿಕಾರಿ ತಿಳುವಳಿಕೆ ಪೇಲವಗೊಳ್ಳುತ್ತದೆ. ಆದ್ದರಿಂದಲೇ ಕಾರ್ಯಾಚರಣೆಯಲ್ಲಿ ಐಕ್ಯತೆಯ ಮೇಲೆ ಒತ್ತು ನೀಡುತ್ತದೆ. ಯಾಕೆಂದರೆ ಅನುಭವವೇ ಅತೀ ದೊಡ್ಡ ಶಿಕ್ಷಕ. ಐಕ್ಯ ಕಾರ್ಯಾಚರಣೆಯಿಂದ ಕಾರ್ಯ ತಂತ್ರಗಳ ಬಗ್ಗೆ ಇರುವ ಸಮಸ್ಯೆಗಳು ಬಗೆಹರಿಯಲು ನೆರವಾಗುತ್ತದೆ. ಕಳೆದ ಕೆಲವು ವರ್ಷಗಳ ಇತಿಹಾಸ ಇದನ್ನು ತೋರಿಸಿಕೊಟ್ಟಿದೆ. ಕಾರ್ಯತಂತ್ರದ ಪ್ರಶ್ನೆಯಲ್ಲಿ ನಮ್ಮನ್ನು ಪರಸ್ಪರ ಸಮೀಪ ತಂದಿದೆ. ಇದೇ ರೀತಿ ಜಂಟಿ ಕಾರ್ಯಾಚರಣೆಯಿಂದ ಪಕ್ಷದ ಕಾರ್ಯಕ್ರಮದ ಬಗ್ಗೆ ವಿಭಿನ್ನ ನಿರೂಪಣೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ. ಬಹುಶಃ ಜಂಟಿ ಕಾರ್ಯಾಚರಣೆಗಳಿಂದ ಸಿ.ಪಿ.ಐ. ತನ್ನ ಚಂಚಲತೆಗಳನ್ನು, ಅರೆ ಮನಸ್ಸಿನ ನಿರೂಪಣೆಗಳನ್ನು ಕಂಡುಕೊಳ್ಳಬಹುದು, ಭಾರತೀಯ ಕ್ರಾಂತಿಯನ್ನು ಮುನ್ನಡೆಸುವ ಸರಿಯಾದ ಹಾದಿ ಹಿಡಿಯಬಹುದು. ಮೂಲಭೂತ ವಿಚಾರಗಳನ್ನು ಪರಿಗಣಿಸದೆ ಕೇವಲ ಐಕ್ಯತೆಯ ಘೋಷಣೆ ಹಾಕುವುದು ಕಮ್ಯೂನಿಸ್ಟರಿಗೆ ಅರ್ಥಹೀನ.

> ಹಿಂದಿನ ನಿರೂಪಣೆ ತಪ್ಪಾಗಿತ್ತು ಎಂದು ಹೇಳುವ ಧೈರ್ಯ ಸಿ.ಪಿ.ಐ. ಗಿಲ್ಲವಾದರೆ ಅದರ ಮಾರ್ಕ್ಸ್‌ವಾದಿ ತಿಳುವಳಿಕೆ ಬಗ್ಗೆ ಹೇಗೆ ತಾನೆ ವಿಶ್ವಾಸ ಮೂಡಲು ಸಾಧ್ಯ?

ನಾಗರೀಕ ಸೌಲಭ್ಯವಿಲ್ಲದ ಉದ್ಯಾನ ನಗರ

ಕಲ್ಲಿನ ಪೊಟರೆಗಳನ್ನು ಸುತ್ತುವರೆದು ಪಶು ಪ್ರಾಣಿಗಳ ಹಂದಿ ಗೂಡಿನಂತಹ ಮನೆಗಳಲ್ಲಿ ಬೆಳಕು ಕಾಣದೆ ಕಾರ್ಗತ್ತಲಿ ನಲ್ಲಿ ಗುಡ್ಡಗಾಡಿನ ಜನರಂತೆ ವಾಸಿಸುವ ಜನರ ಪ್ರದೇಶವೊಂದು ನಗರದಲ್ಲಿದೆ! ಯಾವ ನಾಗರೀಕ ಸೌಲಭ್ಯಗಳಿಲ್ಲದೆ ರಾಜೀವ್‌ಗಾಂಧಿಯವರ 21ನೇ ಶತಮಾನಕ್ಕೆ ನೆಗೆಯುವ ಈ ಕಾಲದಲ್ಲಿ ಉದ್ಯಾನ ನಗರವೆಂದು ಹೆಸರುಗಳಿಸಿರುವ ಬೆಂಗಳೂರೇ ಆ ನಗರ!

ಬೆಂಗಳೂರಿನ ಬನಶಂಕರಿ ದೇವಾಲಯದ ಹಿಂಭಾಗದಲ್ಲಿರುವ ಸರಬಂಡೆಪಾಳ್ಯವೆಂಬ ಹೆಸರು ಪಡೆದಿರುವ (ಬಂಡೆಗಳ ಸಾಲುಸಾಲಾಗಿ ಇರುವುದರಿಂದ ಈ ಹೆಸರು ಇದಕ್ಕೆ ಬಂದಿದೆ) ಸರಬಂಡೆ ಪಾಳ್ಯದಲ್ಲಿ ಸುಮಾರು 100 ಕುಟುಂಬಗಳು ಕೂಲಿ ಮಾಡಿ ಈ ಗೂಡುಗಳಲ್ಲಿ ಜೀವನ ಸಾಗಿಸುತ್ತಾರೆ. ಕುಡಿಯುವ ನೀರು ಶೌಚಾಲಯ, ದಾರಿದೀಪ, ಆಸ್ಪತ್ರೆ, ವಿದ್ಯಾಭ್ಯಾಸ ಮುಂತಾದ ಮೂಲಭೂತ ಸವಲತ್ತು ಗಳಿಂದ ಈ ಜನರು ವಂಚಿತರಾಗಿದ್ದಾರೆ. ಈ ಪ್ರದೇಶಕ್ಕೆ ಭೇಟಿ ನೀಡಿದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಬೆಂಗಳೂರು ಜಿಲ್ಲಾ ಸಮಿತಿ ನಿಯೋಗ ವೊಂದು ಈ ಜನತೆಯೊಂದಿಗೆ ಬೆರೆತು ಅವರ ಸಮಸ್ಯೆಗಳನ್ನು ಕುರಿತು ಒಂದು ಸಭೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕರ ಗಮನಕ್ಕೆ ತಂದು ಮುಂದಿನ ಹಂತದ ಹೋರಾಟಕ್ಕೆ ಈ ಜನತೆಯನ್ನು ಸಿದ್ಧಗೊಳಿಸಲು ನಿರ್ಧರಿಸಿದ್ದಾರೆ.

ಕಾರ್ಮಿಕರ ಸಭೆ

ಬಂಡವಾಳ ಶಾಹಿ ವ್ಯವಸ್ಥೆಗೆ ನಿರುದ್ಯೋಗ, ಬಡತನ, ಅನೈಕ್ಯತೆಗಳು ಕಚ್ಚಾವಸ್ತುಗಳಾಗಿವೆ ಎಂದು ಸಿ.ಐ. ಟಿ.ಯು. ದ.ಕ. ಜಿಲ್ಲಾ ಕಾರ್ಯದರ್ಶಿ ಬಿ. ಮಾಧವರವರು ಹೇಳಿದ್ದಾರೆ. ಅವರು ಫೆ. 26ರಂದು ಬಂಟ್ವಾಳದಲ್ಲಿ ಕಾರ್ಮಿಕರ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಜಾತಿ, ಮತ, ಧರ್ಮ, ಪ್ರಾದೇಶಿಕ ಮನೋಭಾವವನ್ನು ಬಂಡವಾಳಶಾಹಿಗಳು ಪ್ರಚೋದಿಸಿ ದುಡಿಯುವ ಜನತೆಯ ಐಕ್ಯತೆಯನ್ನು ಒಡೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರು ಹೇಳಿ ರೈತ ಕಾರ್ಮಿಕರು ಸಖ್ಯತೆಯಿಂದ ವಿಶಾಲ ತಳಹದಿಯ ಸಂಘಟಿತ ಹೋರಾಟ ನಡೆಸಬೇಕೆಂದು ಅವರು ಕರೆ ನೀಡಿದರು. ಕಾ॥ ಬಿ.ವಾಸುಗಟ್ಟಿ ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕೋಲಾರ ಜಿಲ್ಲಾ ಸಮ್ಮೇಳನ

ದೇಶದಲ್ಲಿ ಭೂಮಾಲೀಕ ಬಂಡವಾಳಶಾಹಿ ಸರ್ಕಾರ ಅಸ್ತಿತ್ವದಲ್ಲಿರುವ ತನಕ ಭೂಮಿಯ ಹಂಚಿಕೆಯ ಪ್ರಶ್ನೆಯನ್ನು ಪರಿಹರಿಸಲು ಸಾಧ್ಯವಿಲ್ಲವೆಂದು ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿಗಳು ಹಾಗೂ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕಾ॥ ಪಿ.ರಾಮಚಂದ್ರ ರಾವ್‌ರವರು ಹೇಳಿದರು. ಅವರು ಫೆ 26ರಂದು ಕೋಲಾರ ಜಿಲ್ಲಾ 10ನೇ ರೈತ ಸಮ್ಮೇಳನವನ್ನು ಮುಳಬಾಗಿಲಿನಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು. ಗಂಭೀರವಾಗಿರುವ ಭೂಮಿ ಪ್ರಶ್ನೆಯ ಇತ್ಯರ್ಥಕ್ಕಾಗಿ ರೈತ-ಕೃಷಿ ಕೂಲಿಕಾರರು ಬಲಿಷ್ಠವಾದ ಚಳವಳಿ ಬೆಳೆಸಬೇಕೆಂದು ಅವರು ಕರೆ ನೀಡಿದರು. ಮುಳುಬಾಗಿಲು ಕ್ಷೇತ್ರದ ಸಿ.ಪಿ.ಐ.(ಎಂ) ಶಾಸಕರಾದ ಕಾ॥ ಆರ್. ವೆಂಕಟರಾಮಯ್ಯನವರು ಮೊದಲಿಗೆ ಧ್ವಜಾರೋಹಣ ಮಾಡಿ ಅಧ್ಯಕ್ಷತೆ ವಹಿಸಿ ಮಾತನಾಡಿ ಜಿಲ್ಲೆಯಲ್ಲಿ ರೈತಚಳುವಳಿ ಬೆಳೆದು ಬಂದ ದಾರಿಯನ್ನು ವಿವರಿಸಿದರು.

ಪ್ರತಿನಿಧಿ ಅಧಿವೇಶನದಲ್ಲಿ ಜಿಲ್ಲಾ ಕಾರ್ಯದರ್ಶಿ ಕಾ॥ ಜಿ.ವಿ.ಅಶ್ವಥನಾರಾಯಣ ರೆಡ್ಡಿಯವರು ವರದಿ ಮಂಡಿಸಿದರು. ಕಾ॥ ಜಿ.ವಿ.ಶ್ರೀಮರೆಡ್ಡಿ ಶ್ರದ್ಧಾಂಜಲಿ ನಿರ್ಣಯ ಮಂಡಿಸಿದರು. ಅಧ್ಯಕ್ಷೀಯ ಮಂಡಳಿ, ನಿರ್ಣಯ ಹಾಗೂ ಅರ್ಹತಾ ಸಮಿತಿ ಆಯ್ಕೆ ಮಾಡಲಾಯಿತು. ವರದಿ ಕುರಿತು ಪ್ರಾಸ್ತಾವಿಕ ಮಾತನಾಡುತ್ತಾ ಕಾ॥ ಜಿ.ವಿ.ಶ್ರೀರಾಮರೆಡ್ಡಿಯವರು ರೈತಸಂಘ ರೂಪಿಸಿದ ಅಖಿಲ ಭಾರತ ಮಟ್ಟದ ಹೋರಾಟಗಳು ಕೃಷಿ ರಂಗದಲ್ಲಿ ಸಾಮ್ರಾಜ್ಯಶಾಹಿಗಳ ಹಿಡಿತ ಸಂಘಟನೆಯನ್ನು, ಮುನ್ನಡೆಸುವಲ್ಲಿ ನಮ್ಮ ಮುಂದಿರುವ ಸವಾಲುಗಳ ಕುರಿತು ಮಾತನಾಡಿದರು.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕಾ॥ ಪರ್ವೀನ್ ತಾಜ್, ಕೃಷಿ ಕೂಲಿಕಾರ ಸಂಘಟನೆ ಕಾ॥ ಸಿ.ವೆಂಕಟರಾಮಯ್ಯ, ಕಾರ್ಮಿಕ ನಾಯಕರಾದ ಕಾ॥ ಜಯರಾಂ ಮತ್ತು ಅಬ್ದುಲ್ ನಜೀರ್‌ರವರು ಶುಭಾಶಯ ಕೋರಿದರು. ಸದಸ್ಯತ್ವ-ಘಟಕ ರಚನೆ ಮುಖಾಂತರ ಜಿಲ್ಲೆಯಲ್ಲಿ ಸಂಘಟನೆಯನ್ನು ಒಂದು ಶಿಸ್ತುಬದ್ಧ ಸಂಘಟನೆಯಾಗಿ ಬೆಳೆಸುವಲ್ಲಿ ಹಾಗೂ ದಿಟ್ಟ ಹೆಜ್ಜೆ ಹಿಡುವಲ್ಲಿ ಮಾರ್ಗಸೂಚಿಯಾಗಿ ಈ ಸಮ್ಮೇಳನ ತುಂಬಾ ಮಹತ್ವದ್ದಾಗಿದೆ. ಈ ಸಮ್ಮೇಳನದಲ್ಲಿ 112 ಪ್ರತಿನಿಧಿಗಳು ಹತ್ತು ವೀಕ್ಷಕರು ಭಾಗವಹಿಸಿದ್ದರು. ಜಿಲ್ಲೆಯ ರೈತ ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು 16 ಪ್ರಮುಖ ನಿರ್ಣಯ ಕೈಗೊಳ್ಳಲಾಯಿತು. ಕೈಗಾ ಸ್ಥಾಪನೆ ಒತ್ತಾಯಿಸುವ ಹಾಗೂ ಜಿಲ್ಲೆಯಲ್ಲಿ ನಡೆದ ಕೋಮುಗಲಭೆ ಖಂಡಿಸುವ ನಿರ್ಣಯ ಸ್ವೀಕರಿಸಲಾಯಿತು. ನೂತನ ಜಿಲ್ಲಾ ಸಮಿತಿಗೆ ಕಾ॥ ಆರ್. ವೆಂಕಟರಾಮಯ್ಯ (ಅಧ್ಯಕ್ಷರು) ಕಾ॥ ಎಸ್. ಲಕ್ಷ್ಮಮಯ್ಯ ಮತ್ತು ಕಾ॥ ಇ.ಎಸ್.ರಾಮಕೃಷ್ಣಪ್ಪ(ಉಪಾಧ್ಯಕ್ಷರು) ಕಾ॥ ಜಿ.ಅಶ್ವಥನಾರಾಯಣರೆಡ್ಡಿ(ಕಾರ್ಯದರ್ಶಿ) ಕಾ॥ ಎಂ. ಗೋಪಾಲ್ ಮತ್ತು ಸಿ.ಡಿ.ಗಂಗುಲಯ್ಯ (ಸಹಕಾರ್ಯದರ್ಶಿಗಳು) ಕಾ॥ ಜಿ.ವಿ. ಶ್ರೀರಾಮರೆಡ್ಡಿ (ಖಜಾಂಚಿ)ಯವರನ್ನೊಳಗೊಂಡ 25 ಜನರ ಜಿಲ್ಲಾ ಸಮಿತಿಯಲ್ಲಿ 4 ಸ್ಥಾನಗಳನ್ನು ಖಾಲಿ ಬಿಡಲಾಗಿದೆ.

ಫೆಬ್ರವರಿ 28ರಂದು ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಬಂದ 5 ಸಾವಿರಕ್ಕೂ ಮೀರಿದ ರೈತ ಕೃಷಿ ಕಾರ್ಮಿಕರ - ಬೃಹತ್ ಮೆರವಣಿಗೆಯನ್ನು ನಡೆಸಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಕಾ॥ ಅಶ್ವಥನಾರಾಯಣರೆಡ್ಡಿ, ಜಿ.ವಿ.ಶ್ರೀರಾಮರೆಡ್ಡಿ, ಕೆ.ಎಂ. ವೆಂಕಟೇಶ್, ಎಸ್.ಲಕ್ಷ್ಮಯ್ಯ, ಹಾಗೂ ಹೆಚ್.ಎನ್. ನಾಗಮೋಹನದಾಸ್‌ರವರು ಮಾತನಾಡಿದರು.

ಜನವರಿ ಮೊದಲ ವಾರದಲ್ಲಿ ನಡೆದ ಜಿಲ್ಲಾ ಸಮಿತಿಯ ತೀರ್ಮಾನದಂತೆ ಜಿಲ್ಲಾ ಸಮ್ಮೇಳನದ ಪೂರ್ವಭಾವಿಯಾಗಿ ನಡೆದ ತಾಲ್ಲೂಕು ಸಮ್ಮೇಳನಗಳು ಹಾಗೂ ಸಮಾವೇಶಗಳ ವಿವರ ಕೆಳಕಂಡಂತಿದೆ.

ಮುಳಬಾಗಿಲು ತಾಲ್ಲೂಕು ಸಮ್ಮೇಳನ (ಜನವರಿ 29) ಶಿಡ್ಲಘಟ್ಟ (ಜನವರಿ 30) ಬಾಗೇಪಲ್ಲಿ (ಫೆಬ್ರವರಿ 5) ಗುಡಿಬಂಡೆ (ಫೆಬ್ರವರಿ 14) ಬಂಗಾರುಪೇಟೆ (ಫೆಬ್ರವರಿ 11) ಗೌರಿಬಿದನೂರು ತಾಲ್ಲೂಕು ಸಮಾವೇಶ (ಫೆಬ್ರವರಿ 5) ಶ್ರೀನಿವಾಸಪುರ ತಾಲ್ಲೂಕು ಸಮಾವೇಶ (ಫೆಬ್ರವರಿ 14)

ಭೋಪಾಲ ಇತ್ಯರ್ಥ; ಬೆಂಗಳೂರು ವಿಜ್ಞಾನಿಗಳ ಪ್ರತಿಭಟನೆ

ಭೋಪಾಲ ಅನಿಲ ದುರಂತಕ್ಕೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟಿನ ನಿರ್ದೇಶನಕ್ಕೆ ವಿಜ್ಞಾನಿಗಳ ನಡುವೆಯೂ ವ್ಯಾಪಕ ಪ್ರತಿಭಟನೆ ಕಂಡು ಬಂದಿದೆ. ಬೆಂಗಳೂರಿನಲ್ಲಿರುವ ವಿಜ್ಞಾನಿಗಳು, ಇಂಜಿನಿಯರುಗಳು, ಅಧ್ಯಾಪಕರುಗಳು ಹಾಗೂ ವಿದ್ಯಾರ್ಥಿಗಳ ಒಂದು ವೇದಿಕೆಯಾದ "ಫೋರಮ್ ಫಾರ್‌ಸಾಯನ್ಸ್ ಅಂಡ್ ಡೆವಲಪ್‌ಮೆಂಟ್"ನ ನೇತೃತ್ವದಲ್ಲಿ "ರಾಷ್ಟ್ರೀಯ ವಿಜ್ಞಾನ ದಿನ" ಫೆಬ್ರವರಿ 28ರಂದು ಒಂದು ಪ್ರತಿಭಟನಾ ಕಾರ್ಯಕ್ರಮ ಆರಂಭಗೊಂಡಿತು. "ನೀವೂ ಒಂದು ಪತ್ರ ಬರೆಯಿರಿ" ಎಂಬ ಈ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ಈ ಇತ್ಯರ್ಥವನ್ನು ಪುನರ್ವಿಮರ್ಶಿಸಿ ಅನಿಲ ದುರಂತಕೊಳ್ಳಗಾದವರಿಗೆ ತೃಪ್ತಿಕರ ಪರಿಹಾರ ಹಾಗೂ ಯೂನಿಯನ್ ಕಾರ್ಬೈಡ್‌ಗೆ ತಕ್ಕ ಶಿಕ್ಷೆಯಾಗಬೇಕೆಂದು ಮನವಿ ಮಾಡಿಕೊಳ್ಳುವ ವೈಯುಕ್ತಿಕ ಪತ್ರ ಬರೆಯಲು ಫೋರಮ್ ಕರೆ ನೀಡಿತು. ಇದಕ್ಕೆ ಓಗೊಟ್ಟು ಭಾರತೀಯ ವಿಜ್ಞಾನ ಸಂಸ್ಥೆಯ ಏಳು ನೂರು ವಿಜ್ಞಾನಿಗಳು ಮುಖ್ಯ ನ್ಯಾಯಾಧೀಶರಿಗೆ ಪತ್ರ ಕಳುಹಿಸಿದ್ದಾರೆಂದು ವರದಿಯಾಗಿದೆ.

ನಗರದಲ್ಲಿರುವ ಇನ್ನೊಂದು ವೈಜ್ಞಾನಿಕ ಸಂಸ್ಥೆಯಾದ ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆಯಲ್ಲೂ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ಸ್ಥಳೀಯ ಘಟಕದ ನೇತೃತ್ವದಲ್ಲಿ ನೂರು ಮಂದಿ ಇದೇ ರೀತಿಯ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದರೆಂದೂ, ಕನ್ನಡ, ತಮಿಳು, ತೆಲುಗು, ಹಿಂದಿ, ಉರ್ದು, ಬಂಗಾಳೀ ಹೀಗೆ ವಿವಿಧ ಭಾಷೆಗಳಲ್ಲಿ ಭಾರತದ ಮುಖ್ಯ ನ್ಯಾಯಾಧೀಶರಿಗೆ ಮನವಿ ಕಳುಹಿಸಲಾಯಿತೆಂದೂ ತಿಳಿದುಬಂದಿದೆ.

ಈ ಪ್ರತಿಭಟನೆಯನ್ನು ಮುಂದುವರಿಸಬೇಕೆಂದು ಇತರ ಎಲ್ಲಾ ಸಂಘಟನೆಗಳಿಗೆ, ಎಲ್ಲಾ ಜನ ವಿಭಾಗಗಳಿಗೆ ಈ ಎರಡು ಸಂಘಟನೆಗಳು ಮನವಿ ಮಾಡಿಕೊಂಡಿವೆ. ಯೂನಿಯನ್ ಕಾರ್ಬೈಡ್‌ನ ಉತ್ಪಾದನೆಗಳನ್ನು ಬಹಿಷ್ಕರಿಸಬೇಕೆಂದೂ ಅವು ಕರೆ ನೀಡಿವೆ.

KRNW / BGS-312 MAG(2) PRB DECR 319-78-79

ಅಫ್‌ಘಾನಿಸ್ತಾನ: ಸಾಮ್ರಾಜ್ಯಶಾಹೀ ತಂತ್ರ ಫಲಿಸುತ್ತಿಲ್ಲ

ಪಾಕಿಸ್ತಾನದ ಅವಾಮೀ ರಾಷ್ಟ್ರೀಯ ಪಕ್ಷದ ಮುಖಂಡ ಖಾನ್ ಅಬ್ದುಲ್ ವಲೀಖಾನ್ ಅಫ್‌ಘಾನಿಸ್ತಾನದ ಅಂತರಿಕ ವ್ಯವಹಾರಗಳಲ್ಲಿ ಮೂಗು ತೂರುವಲ್ಲಿ ಅಮೆರಿಕಾ ಪಾಕಿಸ್ತಾನವನ್ನು ಮುಂಚೂಣಿಗೆ ತಳ್ಳುತ್ತಿದೆ ಎಂದು ಆಪಾದಿಸಿದ್ದಾರೆ. ರಾವಲ್ಪಿಂಡಿ ಬಳಿ ಒಂದು ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಪಾಕೀಸ್ತಾನದ ರಾಜಧಾನಿಯಲ್ಲಿ ಅಫ್‌ಘಾನ್ ಬಂಡುಕೋರರ ಕೂಡಾ ಸಭೆಗಳನ್ನು ನಡೆಸುವುದು ಅತ್ಯಂತ ಆಕ್ಷೇಪಾರ್ಹ ಸಂಗತಿ ಎಂದರು. ಅಮೆರಿಕಾ ಪಾಕಿಸ್ತಾನವನ್ನು ಮುಂದಕ್ಕೆ ತಳ್ಳಿ, ನೆರೆಕರೆಯ ದೇಶಗಳ ವಿರುದ್ಧ ಸಮಾನಾಂತರ ಸರ್ಕಾರಗಳಿಗೆ ಪೋಷಣೆ ನೀಡುತ್ತಿರುವುದು ಪಾಕಿಸ್ತಾನದ ಹಿತಾಸಕ್ತಿಗಳಿಗೆ ಮಾರಕವಾಗಬಹುದು ಎಂದು ಅವರು ಎಚ್ಚರಿಸಿದ್ದಾರೆ. ಪಾಕಿಸ್ತಾನದ ಸರ್ಕಾರ ಅಫ್‌ಘಾನಿಸ್ತಾನದ ಬಗ್ಗೆ ಹಳೆಯ ಧೋರಣೆಯನ್ನು ಮುಂದುವರಿಸುವ ಬದಲು ಪಾಕಿಸ್ತಾನದ ಜನಸಾಮಾನ್ಯರ ಮೂಲಭೂತ ಅಗತ್ಯಗಳ ಪೂರೈಕೆಗೆ ಪ್ರಯತ್ನಿಸಬೇಕೆಂದು ಅವರು ಕರೆ ನೀಡಿದರು.

ಈ ನಡುವೆ ಅಫ್‌ಘಾನಿಸ್ತಾನದ ಸರ್ಕಾರ ಬಂಡುಕೋರರನ್ನು ಹಿಮ್ಮೆಟ್ಟಿಸುವಲ್ಲಿ ದೊಡ್ಡ ಯಶಸ್ಸು ಗಳಿಸಿದೆ ಎಂದು ವರದಿಯಾಗಿದೆ. ಸೋವಿಯೆತ್ ಸೇನೆಯ ವಾಪಸಾತಿಯ ತಕ್ಷಣವೇ ಕಾಬೂಲಿನಲ್ಲಿರುವ ನಜೀಬುಲ್ಲಾ ಸರ್ಕಾರ ತನ್ನ ಅಂತರಿಕ ಭಾರದಿಂದಲೇ ಕುಸಿದು ಬೀಳುತ್ತದೆ ಎಂಬ ಪಾಶ್ಚಿಮಾತ್ಯರ, ಸಾಮ್ರಾಜ್ಯಶಾಹಿಗಳ ನಿರೀಕ್ಷೆ ಹುಸಿಯಾಗಿದೆ.

ಜಿನೀವಾ ಒಪ್ಪಂದ ಜಾರಿಯ ಭರವಸೆ ನೀಡಿದ ದೇಶವಾದ ಅಮೆರಿಕಾ ಒಪ್ಪಂದವನ್ನು ಮುರಿದು ಬಂಡುಕೋರರಿಗೆ ಶಸ್ತ್ರ ಪೂರೈಕೆ ಮುಂದುವರೆಸುವುದಾಗಿ ಘೋಷಿಸಿದರೂ, ತಾನೇ ಘೋಷಿಸಿದ ಬಂಡುಕೋರರು ಇತ್ತೀಚೆಗೆ ರಚಿಸಿಕೊಂಡಿರುವ "ತಾತ್ಕಾಲಿಕ ಸರ್ಕಾರ"ಕ್ಕೆ ಮಾನ್ಯತೆ ನೀಡುವ ಧೈರ್ಯ ಇನ್ನೂ ಮಾಡಿಲ್ಲ. ಪಾಕಿಸ್ತಾನ ಕೂಡಾ ತನ್ನ ನೆಲದಲ್ಲೇ ಇದಕ್ಕೆ ಅವಕಾಶ ನೀಡಿದ್ದರೂ ಇನ್ನೂ ಮಾನ್ಯತೆ ನೀಡುವ ಧೈರ್ಯ ಮಾಡಿಲ್ಲ. ಇದೊಂದು ಸಕಾರಾತ್ಮಕ ಬೆಳವಣಿಗೆ ಎಂದು ಅಫ್‌ಘಾನ್ ಅಧ್ಯಕ್ಷ ನಜಿಬುಲ್ಲಾ ಹೇಳಿದ್ದಾರೆ.

ಪಾಶ್ಚಿಮಾತ್ಯ ದೇಶಗಳು ಅಫ್‌ಘಾನಿಸ್ತಾನದ ವಿರುದ್ಧ ತಮ್ಮ ವೈರತ್ವದ ಆಧಾರದ ಬಗ್ಗೆ ಮರುಯೋಚನೆ ಮಾಡಿ ಅಫ್‌ಘಾನಿಸ್ತಾನಕ್ಕೆ ವಿಶ್ವಸಂಸ್ಥೆಯ ಪರಿಹಾರ ಕ್ರಮಗಳಿಗೆ ಉಂಟುಮಾಡಿರುವ ಅಡ್ಡಿಗಳನ್ನು ನಿವಾರಿಸಬೇಕೆಂದು ನಜೀಬ್ ಮತ್ತೊಮ್ಮೆ ಕರೆ ನೀಡಿದ್ದಾರೆ.

ನಜೀಬುಲ್ಲಾ ರಾಜೀನಾಮೆ ಕೊಡಬೇಕೆಂಬ ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಹೋವ್ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ "ಒಬ್ಬ ವ್ಯಕ್ತಿಯ ರಾಜೀನಾಮೆ ಶಾಂತಿಯ ಪ್ರಕ್ರಿಯೆಯನ್ನು ಬದಲಿಸುವುದಿಲ್ಲ. ಆದರೆ ನನ್ನನ್ನು ಚುನಾಯಿಸಿರುವುದು ಲೋಯಾ ಜಿರ್ಗಾ. ನಾನು ಅದರ ಸಮ್ಮೇಳನ ಕರೆದು ಮತ್ತೊಮ್ಮೆ ಅಧ್ಯಕ್ಷರನ್ನು ಆರಿಸಲು ಕೇಳಬಹುದು. ಅದರ ತೀರ್ಮಾನವನ್ನು ನಾನು ಗೌರವಿಸುತ್ತೇನೆ. ನಾವು ಪ್ರಜಾಸತ್ತಾತ್ಮಕವಾಗಿ ನಿರ್ಣಯ ಕೈಗೊಳ್ಳುತ್ತೇವೆ.-ಬುಶ್ ಅಥವಾ ಹೋವ್‌ಗಳ ಪ್ರಸ್ತಾಪಗಳ ಮೇಲಲ್ಲ. ಈ ರೀತಿ ಪ್ರಸ್ತಾಪಗಳೇ ನಮ್ಮ ಅಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪವಲ್ಲವೇ?" ಎಂದು ಅವರು ಪ್ರಶ್ನಿಸಿದರು.

ವಿದೇಶೀ ಸಾಲದ ಹೊರೆಯಿಂದಾಗಿ ವೆನೆಜುವೆಲಾ ಗಲಭೆ

ಲ್ಯಾಟಿನ್ ಅಮೆರಿಕಾ ದೇಶ ವೆನೆಜುವೆಲಾದಲ್ಲಿ ಕಳೆದ ವಾರ ನಡೆದ ತೀವ್ರ ಗಲಭೆಗಳಲ್ಲಿ ಸುಮಾರು 300 ಮಂದಿ ಸತ್ತು, 2000 ಮಂದಿ ಗಾಯಗೊಂಡಿದ್ದಾರೆ. ಇತ್ತೀಚೆಗೆ ಚುನಾವಣೆ ಗೆದ್ದು ಅಧಿಕಾರಕ್ಕೆ ಬಂದ ಅಧ್ಯಕ್ಷ ಕಾರ್ಲೊಸ್ ಆಂಡ್ರೆಸ್ ಪೆರೆಸ್ ಪ್ರಕಾರ 'ವಿದೇಶೀ ಸಾಲ ಹೊರೆ' ಉಂಟು ಮಾಡಿರುವ 'ಸಾಮಾಜಿಕ ಅಸ್ಫೋಟ'ವಿದು. ಇದರ ಮೊದಲು ಹೊಸ ಸರ್ಕಾರ ದೇಶದ ಸಾರ್ವಜನಿಕ ವಲಯದ ವಿದೇಶೀ ಸಾಲದ ಮರುಪಾವತಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿತ್ತು. ಈ ಸಾಲದ ಒಟ್ಟು ಮೊತ್ತ 27 ಶತಕೋಟಿ ಡಾಲರುಗಳು. ಮಾರ್ಚ್ 1ರಿಂದ ಖಾಸಗೀ ವಲಯದ 5 ಶತಕೋಟಿ ವಿದೇಶೀ ಸಾಲದ ಮರಪಾವತಿ ಕೂಡಾ ನಿಲ್ಲಿಸಲು ಸರ್ಕಾರ ನಿರ್ಧರಿಸಿದೆ.

ತೈಲ ಸಂಪತ್ತಿನಿಂದಾಗಿ ಲ್ಯಾಟಿನ್ ಅಮೆರಿಕಾದಲ್ಲಿ ಅತ್ಯಂತ ಶ್ರೀಮಂತ ದೇಶವಾಗಿದ್ದ ವೆನೆಜುವೆಲಾ ತೈಲ ಬೆಲೆಗಳ ಕುಸಿತದ ಪರಿಣಾಮವಾಗಿ ಸತತವಾಗಿ ಸಾಲದ ಬಲೆಯಲ್ಲಿ ಸಿಲುಕಿಕೊಳ್ಳುತ್ತಾ 1981ರಿಂದೀಚೆಗೆ ನಿಜ ವೇತನದಲ್ಲಿ 33% ಕುಸಿತ ಕಂಡುಬಂದಿದೆ.

ಇದಕ್ಕೆ ಪ್ರತಿಕ್ರಿಯೆಯಾಗಿಯೇ ವೆನೆಜುವೆಲಾ ಜನತೆ ಡಿಸೆಂಬರ್ 1988ರಲ್ಲಿ ತೀವ್ರಗಾಮಿ ಒಲವಿನ ಅಧ್ಯಕ್ಷರನ್ನು 14 ವರ್ಷಗಳ ನಂತರ ಮತ್ತೊಮ್ಮೆ ಆರಿಸಿತು. ಇದೇ ರೀತಿ ಬೇರೆ ಲ್ಯಾಟಿನ್ ಅಮೆರಿಕಾ ದೇಶಗಳ ಬೂರ್ಜ್ವಾ ಪ್ರಜಾಪ್ರಭುತ್ವ ಸರ್ಕಾರಗಳಲ್ಲಿ ತೀವ್ರ ಬದಲಾವಣೆ ಕಂಡು ಬರುತ್ತಿದ್ದು ತೀವ್ರಗಾಮೀ ಒಲವಿನ ವ್ಯಕ್ತಿಗಳು ಅಧಿಕಾರಕ್ಕೆ ಬರುತ್ತಿರುವ ಪ್ರಕ್ರಿಯೆ ಆರಂಭವಾದಂತೆ ಕಾಣಿಸುತ್ತದೆ. ಇದು ಅಮೆರಿಕನ್ ಆಳುವ ವಲಯಗಳನ್ನು ಕಂಗೆಡಿಸುತ್ತಿದೆ. ಈ ಹೊಸ ಬದಲಾವಣೆಗಳು ಲ್ಯಾಟಿನ್ ಅಮೆರಿಕಾದಲ್ಲಿ ತೀವ್ರ ರಾಜಕೀಯ-ಸಾಮಾಜಿಕ ಬದಲಾವಣೆಗಳನ್ನು ತರಬಹುದೆಂಬ ಭಯವೇನೂ ಅವರಿಗಿಲ್ಲ. ಅವರಿಗೀಗ ಇರುವ ಭಯ ಅಧ್ಯಕ್ಷ ಕಾರ್ಲೋಸ್‌ರಂತವರ "ರಾಷ್ಟ್ರೀಯವಾದ"ದ ಬಗ್ಗೆ. ಯಾಕೆಂದರೆ ಈ ಲ್ಯಾಟಿನ್ ಅಮೆರಿಕಾ ದೇಶಗಳ ರಾಷ್ಟ್ರೀಯ ಹಿತಾಸಕ್ತಿಗಳು ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಗಳಿಗೆ ಮಾರಕವಾಗುವ ಭಯ ಅವರಿಗೆ.

ಇನ್ನೊಬ್ಬ ಸರ್ವಾಧಿಕಾರಿಯ ಪದಚ್ಯುತಿ

ಫೆಬ್ರವರಿ 2-3ರ ರಾತ್ರಿ ಲ್ಯಾಟಿನ್ ಅಮೇರಿಕಾದ ಇನ್ನೊಂದು ದೇಶ ಪರಾಗ್ವೆಯ ಸರ್ವಾಧಿಕಾರಿ ಆಲ್ಫ್ರೆಡೋ ಸ್ಟ್ರಾಸನರ್ ಪದಚ್ಯುತಿ 1954ರಿಂದ ಆಗಾಗ ಚುನಾವಣೆಯ ನಾಟಕ ಮಾಡುತ್ತಾ ಸರ್ವಾಧಿಕಾರ ನಡೆಸುತ್ತಾ ಬಂದಿರುವ ಸ್ಟ್ರಾಸನರ್‌ನ ಭಯೋತ್ಪಾದಕ ಆಳ್ವಿಕೆಯ ಅಂತ್ಯದ ಸುದ್ದಿ ಕೇಳಿದ ಪರಾಗ್ವೆಯ ಜನತೆ ಬೀದಿಗಿಳಿದು ಕುಣಿದಾಡಿದರು.

ಸ್ಟ್ರಾಸನರ್ ಆಳ್ವಿಕೆಯಲ್ಲಿ ಪರಾಗ್ವೆ ಭ್ರಷ್ಟಾಚಾರದ ನೆಲೆವೀಡಾಗಿ ಬಿಟ್ಟಿತ್ತು. ಅಫೀಮಿನ ಕಾನೂನುಬಾಹಿರ ವಹಿವಾಟಿನಲ್ಲಿ ತೊಡಗಿರುವ ಅಂತರರಾಷ್ಟ್ರೀಯ ಮಾಫಿಯಾದ ಬಹಿರಂಗ ನೆಲೆಯಾಗಿತ್ತು. ಅಷ್ಟೇ ಅಲ್ಲ, ವಿದೇಶಗಳ ಬಲ ಪಂಥೀಯ ಕೊಲೆಗಾರರಿಗೆ, ನಾಝಿಗಳಿಗೆ ಇಲ್ಲಿ ಆಶ್ರಯ ದೊರೆಯುತ್ತಿತ್ತು. ನಿಕರಾಗುವಾದ ಮಾಜೀ ಸರ್ವಾಧಿಕಾರಿ ಅಲ್ಲಿಯ ಕ್ರಾಂತಿಯ ನಂತರ ಪಲಾಯನ ಮಾಡಿದ್ದು ಈ ದೇಶಕ್ಕೇ.

ಕಳೆದ ಡಿಸೆಂಬರ್‌ನಲ್ಲಿ ಸ್ಟ್ರಾಸನರ್‌ನ ಗುಪ್ತ ಪೋಲಿಸರು ಒಂದೇ ಬಾರಿಗೆ ವಿರೋಧ ಪಕ್ಷಗಳ, ಕಾರ್ಮಿಕ ಸಂಘಗಳ, ಯುವ ಮತ್ತು ವಿದ್ಯಾರ್ಥಿ ಸಂಘಟನೆಗಳ 30 ಪ್ರಮುಖ ಮುಖಂಡರನ್ನು ಜೈಲಿಗಟ್ಟಿದರು. ಪರಾಗ್ವೆ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಅಂತೋನಿಯೋ ಮೈಡಾನಾರವರನ್ನು ಎಲ್ಲಿ ಬಂಧಿಸಡಲಾಗಿದೆ ಎಂದು ಬಹಳ ದಿನಗಳಿಂದ ಪತ್ತೆಯೇ ಇಲ್ಲ.

ಈಗ ಸ್ಟ್ರಾಸನರ್‌ನ ಪತನದ ನಂತರ ಲ್ಯಾಟಿನ್ ಅಮೇರಿಕಾದಲ್ಲಿ ಉಳಿದಿರುವುದು ಚಿಲಿಯ ಸರ್ವಾಧಿಕಾರಿ ಪಿನೋಚೆ ಮಾತ್ರ. 1980ರ ದಶಕದಲ್ಲಿ ಈ ಪ್ರದೇಶದ ಸರ್ವಾಧಿಕಾರಿ 'ಗೊರಿಲ್ಲಾ'ಗಳ ಮೆರವಣಿಗೆಯೇ ಸಾಗಿದಂತಿದೆ. 1982ರಲ್ಲಿ ಬೋಲಿವಿಯಾದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮರು ಸ್ಥಾಪನೆಯಾಯಿತು. 1983ರಲ್ಲಿ ಅರ್ಜೆಂಟಿನಾದಲ್ಲಿ ನಾಗರೀಕ ಸರ್ಕಾರ. 1985 ರಲ್ಲಿ ಉರುಗ್ವೆ ಮತ್ತು ಬ್ರಾಝಿಲ್‌ನಲ್ಲಿ ಇದರ ಪುನರಾವರ್ತನೆ. 1986ರಲ್ಲಿ ಗ್ವಾಟೆಮಾಲದಲ್ಲಿ ಮಿಲಿಟರಿ ಸರ್ಕಾರ ಪತನಗೊಂಡಿತು. ಹೈಟಿಯ ಸರ್ವಾಧಿಕಾರಿ ಪಲಾಯನ ಮಾಡಿದ.

ಪರಾಗ್ವೆಯಲ್ಲಿಯೂ ಪ್ರಜಾಪ್ರಭುತ್ವ ಮತ್ತೆ ಸ್ಥಾಪನೆಯಾಗುವುದೇ ಎಂದು ಕಾದು ನೋಡಬೇಕಾಗಿದೆ. ಯಾಕೆಂದರೆ ಸ್ಟ್ರಾಸನರ್ ಪದಚ್ಯುತಿಯ ನಂತರ ತಾತ್ಕಾಲಿಕ ಅಧ್ಯಕ್ಷರಾಗಿ ಬಂದಿರುವ ಜನರಲ್ ರಾಡ್ರಿಗಸ್ ಬಹಳ ದಿನ ಸ್ಟ್ರಾಸನರ್ ಅತ್ಯಂತ ವಿಧೇಯ ಸೇವಕನಾಗಿದ್ದಾತ. ಸ್ಟ್ರಾಸನರ್‌ನ ದುರಾಡಳಿತದ ಲಾಭ ಪಡೆದಾತ. ಆದರೂ ಮೂರು ತಿಂಗಳೊಳಗೆ ಅಧ್ಯಕ್ಷ ಚುನಾವಣೆ ನಡೆಸುವ ವಚನ ನೀಡಿದ್ದಾರೆ. ಪರಾಗ್ವೆಯ ಜನತೆ ತೀವ್ರ ಬದಲಾವಣೆ ಆಗಲಿದೆಯೋ ಎಂದು ನಿರೀಕ್ಷಿಸುತ್ತಿದ್ದಾರೆ.

ಕುಂದಾಪುರ ತಾ॥ಯಶಸ್ವಿ ಸಮ್ಮೇಳನ

ಸ್ವತಂತ್ರ ಭಾರತದ ಆಳುವ ವರ್ಗಗಳು ಅನುಸರಿಸಿದ ಬಂಡವಾಳಶಾಹಿ ಭೂಮಾಲಕ ಪರ ಆರ್ಥಿಕ ನೀತಿಗಳಿಂದಾಗಿ ದೇಶದ ಬೆನ್ನೆಲುಬು ಎಂದು ಹೇಳಲಾಗುವ ರೈತರ ಪರಿಸ್ಥಿತಿಯು ತೀವ್ರ ಹದಗೆಟ್ಟಿದೆ. ಕೃಷಿ ಕೂಲಿಗಾರರ ಜೀವನ ಸ್ಥಿತಿ ದಯನೀಯವಾಗಿದೆ. ರೈತ ಕೃಷಿ ಕೂಲಿಕಾರ ಕಾರ್ಮಿಕ ವರ್ಗದೊಡನೆ ಸೇರಿ ಪ್ರಸಕ್ತ ವ್ಯವಸ್ಥೆಯನ್ನು ಬದಲಾಯಿಸುವುದೇ ಸಮಸ್ಯೆಗಳ ಪರಿಹಾರಕ್ಕಿರುವ ಮಾರ್ಗ ಎಂದು ದ.ಕ. ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾ॥ ಕೆ.ಆರ್.ಶ್ರೀಯಾನ್ ಹೇಳಿದರು.

ಕುಂದಾಪುರ ತಾ॥ ರೈತ ಸಂಘದ 9ನೇ ಸಮ್ಮೇಳನವನ್ನು ಫೆ. 26ರಂದು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಇದೇ ಮೊದಲ ಬಾರಿಗೆ ರೈತರ ಸಮ್ಮೇಳನವು ತಾ॥ನ ಮಲೆನಾಡು ಪ್ರದೇಶ ಸಿದ್ಧಾಪುರದಲ್ಲಿ ಜರುಗಿತು.

ಕಾ॥ ಶ್ರೀಯಾನ್‌ರವರು ತಮ್ಮ ಸುದೀರ್ಘ ಉದ್ಘಾಟನಾ ಭಾಷಣದಲ್ಲಿ ಕೇಂದ್ರ ಕಾಂಗ್ರೆಸ್ ಸರ್ಕಾರದ ಪ್ರಸಕ್ತ ನೀತಿಗಳು, ಅದರ ಪರಿಣಾಮವಾದ ನಿರುದ್ಯೋಗ, ಕಾರ್ಖಾನೆ ಮುಚ್ಚುವಿಕೆ, ಹಸಿವು ಮೊದಲಾದ ವಿಚಾರಗಳನ್ನು ಪ್ರಸ್ತಾಪಿಸಿದರು.

ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ॥ ಅಬ್ರಹಾಂ ಕರ್ಕಡ, ಜಿಲ್ಲಾ ಮುಖಂಡರಾದ ಕಾ॥ ಡೇವಿಡ್ ಕರ್ಕಡ, ಯು.ಜನಾರ್ಧನ ನ್ಯಾಕ್ ಅವರು ಉಪಸ್ಥಿತರಿದ್ದು ಮಾರ್ಗದರ್ಶನ ನೀಡಿದರು. ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು ಶುಭ ಕೋರಿ ಮಾತನಾಡಿದರು.

ತಾ॥ ಕಾರ್ಯದರ್ಶಿ ಕಾ॥ ದಾಸಭಂಡಾರಿ ವರದಿ ಮಂಡಿಸಿದರು. ವರದಿಯಲ್ಲಿ ಕೇವಲ ಚಟುವಟಿಕೆ ಮತ್ತು ಸಂಘಟನಾ ವಿಚಾರಗಳಿರದೆ ತಾಲ್ಲೂಕಿನ ಭೌಗೋಳಿಕ ವಿವರಗಳು, ರೈತರ ಸ್ಥಿತಿ, ಭೂಸುಧಾರಣಾ ಕಾಯ್ದೆಯಿಂದ ಪ್ರಯೋಜನ ಪಡೆದವರು, ಹೆಚ್ಚುವರಿ ಭೂಮಿ-ವಿತರಣೆ ಮೊದಲಾದ ಅಂಶಗಳೂ ಒಳಗೊಂಡಿದ್ದು ಅನುಕರಣೀಯವಾಗಿತ್ತು.

ತಾಲ್ಲೂಕಿನ 5 ಸಾವಿರ ಸದಸ್ಯರನ್ನು ಪ್ರತಿನಿಧಿಸಿ 18 ಮಹಿಳೆಯರನ್ನೊಳಗೊಂಡಂತೆ ಸುಮಾರು 100 ಪ್ರತಿನಿಧಿಗಳು ಹಾಜರಿದ್ದರು. ಇವರಲ್ಲಿ 20 ಜನರು ಚರ್ಚೆಯಲ್ಲಿ ಪಾಲ್ಗೊಂಡರು.

ಕುಂದಾಪುರ, ಉಡುಪಿ ತಾಲ್ಲೂಕುಗಳ ರೈತರಿಗೆ ಪ್ರಯೋಜನವಾಗುವ ವಾರಾಹಿ ನೀರಾವರಿ ಯೋಜನೆಯನ್ನು ಶೀಘ್ರ ಜಾರಿಗೊಳಿಸಬೇಕು, ಅಕ್ರಮಿತ ಭೂಮಿಯನ್ನು ಸಕ್ರಮಗೊಳಿಸಬೇಕು, ರೈತರಿಂದ ಪ್ರೀಮಿಯಂ ವಸೂಲಾತಿ ನಿಲ್ಲಿಸಬೇಕು ಮುಂತಾದ ಕೇಳಿಕೆಗಳಿಗೆ ಸಂಬಂಧಪಟ್ಟ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಸಮ್ಮೇಳನದ ಅಂಗವಾಗಿ ತಾಲ್ಲೂಕಿನ ವಿವಿಧ ಭಾಗಗಳಿಂದ ಬಂದ ರೈತ ಕೃಷಿ ಕೂಲಿಕಾರರು ಮತ್ತು ಕಾರ್ಮಿಕರಿರುವ ಮೆರವಣಿಗೆಯೊಂದು ನಡೆಯಿತು. ಮಹಿಳೆಯರು ಗಣನೀಯ ಸಂಖ್ಯೆಯಲ್ಲಿದ್ದರು. ಅನಂತರ ಶಿವರಾಮಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಕಾ॥ ಕೆ.ಆರ್.ಶ್ರೀಯಾನ್ ಮತ್ತು ಅಬ್ರಹಾಂ ಕರ್ಕಡ ಜನಾರ್ಧನ ನ್ಯಾಕ್ ಮಾತನಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕಮಲಶಿಲೆ ಮತ್ತು ಮುದೂರು ಪ್ರದೇಶದ ರೈತರು ಕೋಲಾಟ, ಮತ್ತಿತರ ಕಲಾಪ್ರಕಾರ ಪ್ರದರ್ಶಿಸಿದರು. ಹೊಸ ತಾಲೂಕು ಸಮಿತಿಗೆ ಕಾ॥ ಯು.ಶಿವರಾಮಶೆಟ್ಟಿ (ಅಧ್ಯಕ್ಷ) ವೆಂಕಟೇಶ್ ಕೋಣಿ, ಗೋವಿಂದ ಶೆಟ್ಟಿಗಾರ್ (ಉಪಾಧ್ಯಕ್ಷರು) ಕಾ॥ ಯು. ದಾಸಭಂಡಾರಿ (ಕಾರ್ಯದರ್ಶಿ), ಗೋಪಾಲ ಶೆಟ್ಟಿಗಾರ್, ಬಿ.ಟಿ.ಮಂಜುನಾಥ (ಸಹ ಕಾರ್ಯದರ್ಶಿಗಳು) ಇತರ 25 ಸದಸ್ಯರನ್ನೊಳಗೊಂಡ ಸಮಿತಿ ಆರಿಸಲಾಯಿತು.

ಇದೇ ಸಮ್ಮೇಳನದಲ್ಲಿ ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದ ಕುಂದಾಪುರ ತಾಲ್ಲೂಕು ಸಂಘಟನಾ ಸಮಿತಿ ರಚಿಸಿ ಕಾ॥ ದಾಸ್‌ಭಂಡಾರಿ ಸಂಚಾಲಕರನ್ನಾಗಿ ಆರಿಸಲಾಯಿತು. 17 ಸದಸ್ಯರನ್ನು ಆರಿಸಲಾಯಿತು

ಸರ್ಕಾರಿ ನೌಕರರ ಮುಷ್ಕರಕ್ಕೆ ಬೆಂಬಲ

ಬಂಟ್ವಾಳದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ನಡೆಸುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಸಿ.ಪಿ.ಐ.(ಎಂ) ಬಂಟ್ವಾಳ ತಾಲ್ಲೂಕು ಕಾರ್ಯದರ್ಶಿ ಕಾ॥ ಬಿ.ವಾಸುಗಟ್ಟಿಯವರು ಬೆಂಬಲ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿಗಳು ನೌಕರರ ಬೇಡಿಕೆಗಳ ಕುರಿತು ಸಹಾನುಭೂತಿಯಿಂದ ಪರಿಶೀಲಿಸಿ ಬಗೆಹರಿಸಬೇಕೆಂದು ಒತ್ತಾಯಿಸಿರುವ ಅವರು ಕಾಂಗ್ರೆಸ್ ಹಾದಿ ತುಳಿಯದೆ ಸಮಸ್ಯೆಗೆ ಕೂಡಲೇ ಪರಿಹಾರ ಒದಗಿಸಬೇಕೆಂದು ಮನವಿ ಮಾಡಿದ್ದಾರೆ.

ಪುತ್ತೂರು ತಾಲ್ಲೂಕು ಸಮ್ಮೇಳನ

ತಾಲ್ಲೂಕಿನ ರೈತರನ್ನು ಪ್ರತಿನಿಧಿಸಿ 118 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದ ಪುತ್ತೂರು ತಾ॥ ಸಮ್ಮೇಳನ ಉಪ್ಪಿನಂಗಡಿಯ ಸಂಗಮ ಕೃಪ ಸಭಾಂಗಣದಲ್ಲಿ ಜರುಗಿತು. ಕ್ರಾಂತಿ ಗೀತೆ ಹಾಗೂ ಕಾರ್ಯದರ್ಶಿ ಎಲ್ಫ್ರೆಡ್ ಡಿ'ಸೋಜರ ಸ್ವಾಗತದೊಂದಿಗೆ ಸಮ್ಮೇಳನ ಆರಂಭವಾಯಿತು. ಶ್ರದ್ಧಾಂಜಲಿ ಅರ್ಪಿಸಿದ ನಂತರ ಕಾರ್ಯದರ್ಶಿ ವರದಿ ಮಂಡಿಸಿದರು. ಪ್ರತಿನಿಧಿಗಳನ್ನುದ್ದೇಶಿಸಿ ಜಿಲ್ಲಾಕಾರ್ಯದರ್ಶಿ ಕಾ॥ ಅಬ್ರಹಾಂ ಕರ್ಕಡ, ಉಪಾಧ್ಯಕ್ಷ ಜನಾರ್ಧನ ನ್ಯಾಕ್, ಕೋಶಾಧಿಕಾರಿ ಡೇವಿಡ್ ಕರ್ಕಡವರು ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಪರಮೇಶ್ವರ ನಂಬೀಶನ್ ರವರು ಮಾತನಾಡಿದರು. ತಾಲ್ಲೂಕಿನ ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುವುದಾಗಿ ಪ್ರತಿಜ್ಞೆ ಸ್ವೀಕರಿಸುವ ಮೂಲಕ ಸಮ್ಮೇಳನ ಮುಕ್ತಾಯಗೊಂಡಿತು.

ಸಂಜೆ ನಡೆದ ಮೆರವಣಿಗೆ ಬಹಿರಂಗ ಸಭೆಯಲ್ಲಿ ಕಾ॥ ಕೆ.ಆರ್.ಶ್ರೀಯಾನ್, ಜನಾರ್ಧನ್‌ನ್ಯಾಕ್ ಸೂರ್ಯನಾರಾಯಣ ಭಟ್ ಮಾತನಾಡಿದರು. 'ವ್ಯವಸ್ಥೆ' ಎಂಬ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಪುತ್ತೂರು ತಾ॥ ಸಮಿತಿಗೆ ಕಾ॥ ಪಿ.ಕೆ. ಸತೀಶನ್ (ಅಧ್ಯಕ್ಷ) ವಿಲ್ಫ್ರೆಡ್ ಡಿ'ಸೋಜ (ಕಾರ್ಯದರ್ಶಿ) ಪಾವ್ಲ್ ಡಿ'ಸೋಜ ಮತ್ತು ಪದ್ಮನಾಭನ್ಯಾಕ್ (ಉಪಾಧ್ಯಕ್ಷರು) ಸಿ.ಅಣ್ಣು ಮತ್ತು ರಾಘವಗೌಡ (ಜೊತೆ ಕಾರ್ಯದರ್ಶಿಗಳು) ಚೋಮ (ಕೋಶಾಧಿಕಾರಿ)ರವರನ್ನು ಒಳಗೊಂಡ 13 ಜನರ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು.

ಬೀದರ್; ಭೂಸಮಾವೇಶ, ಸಮ್ಮೇಳನ

ಬೀದರ್ ಜಿಲ್ಲೆಯ ವಿವಿದೆಡೆಗಳಿಂದ ಬಂದ 200 ಪ್ರತಿನಿಧಿಗಳು ಭಾಗವಹಿಸಿದ್ದ ಜಿಲ್ಲಾ ಭೂಸುಧಾರಣಾ ಸಮಾವೇಶ ಹಾಗೂ ಜಿಲ್ಲಾ ರೈತ ಸಮ್ಮೇಳನ ಫೆ. 20ರಂದು ಡಿ.ಸಿ.ಸಿ. ಬ್ಯಾಂಕ್ ಹಾಲ್‌ನಲ್ಲಿ ಜರುಗಿತು.

ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾ॥ ಎನ್. ಕೆ.ಉಪಾಧ್ಯಾಯ ಸಮ್ಮೇಳನವನ್ನು ಉದ್ಘಾಟಿಸಿದರು. ಗುಲ್ಬರ್ಗಾ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ॥ ಮಾರುತಿ ಮಾನ್ಪಡೆಯವರು ಸಭೆಯಲ್ಲಿ ಮಾತನಾಡಿದರು. ಸಕ್ಕರೆ ಕಾರ್ಖಾನೆಯ ಈಶ್ವರಪ್ಪ ಚಲುವಾರವರು ಅಧ್ಯಕ್ಷತೆ ವಹಿಸಿದ್ದರು.

ಬಡವರು ಆಕ್ರಮಿಸಿರುವ ಭೂಮಿಯನ್ನು ಸಕ್ರಮಗೊಳಿಸಿ ಪಟ್ಟಾ ನೀಡಬೇಕು, ಹಸಿರುಕಾರ್ಡ್ ನೀಡಬೇಕು, ಅತಿವೃಷ್ಟಿಯಿಂದ ಬೆಳೆ, ಮನೆ ಕಳೆದುಕೊಂಡವರಿಗೆ ಪರಿಹಾರ, ರಸ್ತೆ ದುರಸ್ತಿ

ಏಜೆನ್ಸಿದಾರರಲ್ಲಿ, ಚಂದಾದಾರರಲ್ಲಿ ವಿನಂತಿ

ಹಣಕಾಸಿನ ತೊಂದರೆಯಿಂದಾಗಿ ಈ ಸಂಚಿಕೆ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗಿಲ್ಲ. ನಮ್ಮೆಲ್ಲ ಏಜೆನ್ಸಿದಾರರಿಗೆ ಈ ಬಗ್ಗೆ ಈಗಾಗಲೇ ಎರಡು ಬಾರಿ ವೈಯಕ್ತಿಕವಾಗಿ ಪತ್ರ ಕಳಿಸಿದ್ದೇವೆ. ತಮ್ಮ ಬಾಕಿ ಹಣವನ್ನು ತಕ್ಷಣ ಪಾವತಿ ಮಾಡಿ ಪತ್ರಿಕೆಯ ನಿಯಮಿತ ಪ್ರಕಟಣೆಯಲ್ಲಿ ಸಹಕರಿಸಬೇಕೆಂದು ಮತ್ತೊಮ್ಮೆ ಏಜೆನ್ಸಿದಾರರನ್ನು ಮತ್ತು ಚಂದಾದಾರರನ್ನು ವಿನಂತಿಸಿಕೊಳ್ಳುತ್ತೇವೆ.

-ವ್ಯವಸ್ಥಾಪಕರು

Printed & Published by P.Ramachandra Rao on behalf of Communist Party of India (Marxist) Karnataka State Committee, K.V Temple Street, Sulthanpet, Bangalore-560053. Editor: P.Ramachandra Rao Managing Editor N.K.Upadhyaya
Managerial Office: Shobha Lodge Complex. 5th Main Road, Gandhinagar, Bangalore-560009.